ಸಂಪಾದಕರು : ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಫೆಬ್ರವರಿ 17, 2025

ಸಂಪುಟ : 51 ಸಂಚಿಕೆ : 276 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ನದಿಗಳ ಶುದ್ಧತೆಗೆ ಕಠಿಣ ಕಾನೂನು ರೂಪಿಸಲಿ



**ತುಂಗಭದ್ರಾರತಿಯಲ್ಲಿ ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ ಒತ್ತಾಯ**

ಹರಿಹರ, ಫೆ.16- ನದಿಗಳ ಶುದ್ಧತೆ ಹಾಗೂ ಪಾವಿತ್ರ್ಯತೆಗೆ ಕಠಿಣ ಕಾನೂನು ರೂಪಿಸಿ, ಕಟ್ಟು ನಿಟ್ಟಾಗಿ ಪರಿಪಾಲಿಸುವ ವ್ಯವಸ್ಥೆ ಜಾರಿಗೊಳಿಸಲು ಸರ್ಕಾರ ಮುಂದಾಗಬೇಕು ಎಂದು ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಒತ್ತಾಯಿಸಿದರು.

ಸಮೀಪದ ಕೋಡಿಯಾಲ ಹೊಸಪೇಟೆಯ ತುಂಗಭದ್ರಾ ನದಿಯ ದಡದಲ್ಲಿರುವ ಅವಿಮುಕ್ತ ಪುಣ್ಯಕೋಟಿ ಮಠದ ಬಾಲ ಯೋಗಿ ಜಗದೀಶ್ವರ ಶ್ರೀಗಳು ಹಮ್ಮಿಕೊಂಡಿದ್ದ ತುಂಗಭದ್ರಾರತಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಡ್ಯಾಮ್‌ಗಳು ಹಾಗೂ ನದಿಗಳು ಬೇಸಿಗೆ ಸಂದರ್ಭದಲ್ಲಿ ಬತ್ತಿಹೋಗದಂತೆ ನೋಡಿಕೊಳ್ಳಬೇಕಾದ ಮಹತ್ತರ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಮೇಲಿದೆ. ನದಿಯ ದಡದಲ್ಲಿ ಗಿಡಗಳನ್ನು ನೆಡುವ ಮೂಲಕ ನದಿಯ ನೀರು ಬಿಸಿಲಿನ ಬೇಗೆಗೆ ಆವಿಯಾಗುವುದನ್ನು ತಡೆಯ ಬೇಕಿದೆ ಎಂದು ಸಲಹೆ ನೀಡಿದರು.

ಕಾರ್ಖಾನೆಗಳು ಮತ್ತು ನಗರಗಳ ಕಲುಷಿತ ನೀರನ್ನು ನೇರವಾಗಿ ನದಿಗೆ ಬಿಡದೆ ಆ ನೀರನ್ನು ಶುದ್ಧೀಕರಣ ಗೊಳಿಸಿ ನದಿಗೆ ಬಿಡುವುದರಿಂದ ನದಿಗಳ ಪಾವಿತ್ರ್ಯತೆಯನ್ನು ಕಾಪಾಡಲು ಸಾಧ್ಯ ಇಂತಹ ತಿಳುವಳಿಕೆಗಳನ್ನೇ ನೀಡಲು ಗಂಗಾರತಿ ಮತ್ತು ತುಂಗಭದ್ರಾರತಿ ಮಾಡಲಾಗುತ್ತದೆ ಎಂದರು.

ನದಿಯನ್ನು ಪವಿತ್ರಗೊಳಿಸಿ, ಪೂಜಿಸುವುದೇ 'ತುಂಗಭದ್ರಾರತಿಯ' ಮುಖ್ಯ ಉದ್ದೇಶ ಆಗಿದೆ. ಆದರೆ ಒಂದೆಡೆ ಜಲಮೂಲವನ್ನು ಅಪವಿತ್ರ ಹಾಗೂ ಅಶುದ್ಧಗೊಳಿಸುತ್ತಿರುವ ಕಾರ್ಯ ನಿರಂತರವಾಗಿ ನಡೆಯುತ್ತಿರುವುದು ವಿಪರ್ಯಾಸದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ಮಾತನಾಡಿದ ಬಾಲಯೋಗಿ ಜಗದೀಶ್ವರ ಶ್ರೀಗಳು, ಪುಣ್ಯಕೋಟಿ ಮಠಕ್ಕೆ ಭಕ್ತರೇ ಆಸ್ತಿ. ಅವರ ಕೋರಿಕೆಗೆ ಶ್ರೀಮಠವು ಸಮ್ಮತಿಸುತ್ತಾ ಬಂದಿದೆ. ಭಕ್ತರ ಆಶಯದಂತೆ ತುಂಗಾರಾತಿಯನ್ನು ತುಂಗಭದ್ರಾರತಿಯಾಗಿ ಆಯೋಜಿಸುತ್ತಿರುವುದು ನಮಗೂ ಹರ್ಷವಾಗಿದೆ ಎಂದರು. (4ನೇ ಪುಟಕ್ಕೆ)

## ದೆಹಲಿ ರೈಲ್ವೆ ನಿಲ್ದಾಣದಲ್ಲಿ ಕಾಲ್ತುಳಿತ

### ಕುಂಭಮೇಳಕ್ಕೆ ತೆರಳುತ್ತಿದ್ದ 18 ಪ್ರಯಾಣಿಕರ ಸಾವು, ಹಲವರಿಗೆ ಗಾಯ



ನವದೆಹಲಿ, ಫೆ. 16 - ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಗೊಂದಲದಿಂದಾಗಿ ಕಾಲ್ತುಳಿತ ಸಂಭವಿಸಿ 18 ಜನ ಸಾವನ್ನಪ್ಪಿದ್ದಾರೆ.

ಕುಂಭಮೇಳ ನಡೆಯುತ್ತಿರುವ ಪ್ರಯಾಗ್‌ರಾಜ್‌ಗೆ ತೆರಳುವ ರೈಲುಗಳ ಹೆಸರು ಬಹುತೇಕ ಒಂದೇ ರೀತಿ ಇದ್ದ ಕಾರಣ ಜನರು ಗೊಂದಲಕ್ಕೀಡಾಗಿ ಧಾವಂತ ನಡೆಸಿದ್ದಾರೆ. ಇದರಿಂದ ಕಾಲ್ತುಳಿತ ಸಂಭವಿಸಿದೆ.

11 ಮಹಿಳೆಯರು ಹಾಗೂ 4 ಮಕ್ಕಳು ಸೇರಿದಂತೆ 18 ಜನರು ಸಾವನ್ನಪ್ಪಿದ್ದಾರೆ. ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ ಹಾಗೂ ಇತರೆ 27 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಶನಿವಾರ ರಾತ್ರಿ ನಡೆದ ಈ ಘಟನೆಗೆ ಕಾರಣ ವೇನು ಎಂಬುದರ ಪತ್ತೆಗಾಗಿ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸುತ್ತಿರುವುದಾಗಿ ದೆಹಲಿ ಪೊಲೀಸರು ತಿಳಿಸಿದ್ದಾರೆ. ಘಟನೆಯ ತನಿಖೆಗಾಗಿ ರೈಲ್ವೆ ಸಚಿವಾಲಯವು ಇಬ್ಬರು ಸದಸ್ಯರ ಉನ್ನತ ಹಂತದ ಸಮಿತಿಯನ್ನು ರಚಿಸಿದೆ.

ಶನಿವಾರ ರಾತ್ರಿ 9.55ರ ಸಮಯದಲ್ಲಿ ದೆಹಲಿ ರೈಲ್ವೆ ನಿಲ್ದಾಣದಲ್ಲಿ ಜನಸಂದಣಿ ಅತಿಯಾಗಿ ಹೆಚ್ಚಾಗಿತ್ತು. ಇವರಲ್ಲಿ ಬಹುತೇಕರು ಮಹಾಕುಂಭಕ್ಕೆ ತೆರಳುವ ಯಾತ್ರಿಗಳಾಗಿದ್ದರು. ಇವರು ಪ್ರಯಾಗ್ ರಾಜ್‌ಗೆ ತೆರಳುವ ರೈಲುಗಳಿಗಾಗಿ ಕಾಯುತ್ತಿದ್ದರು. ಕುಂಭಮೇಳಕ್ಕಾಗಿ ಕಳೆದ ಕೆಲ ದಿನಗಳಿಂದ ಹಲವಾರು ವಿಶೇಷ ರೈಲುಗಳ ಸೇವೆ ಒದಗಿಸಲಾಗುತ್ತಿದೆ.

ಪ್ರಯಾಗ್‌ರಾಜ್ ಎಕ್ಸ್‌ಪ್ರೆಸ್ ರೈಲು ಪ್ಲಾಟ್ ಫಾರಂ ನಂಬರ್ 14ರಲ್ಲಿ ಬರುವ ಹಂತದಲ್ಲಿತ್ತು. ಈ ರೈಲಿಗೆ ಸಾಕಷ್ಟು ಪ್ರಯಾಣಕರು ಕಾಯುತ್ತಿದ್ದರು.

ಅದೇ ವೇಳೆ ಪ್ರಯಾಗ್‌ರಾಜ್ ಸ್ಪೆಷಲ್ ರೈಲು ಪ್ಲಾಟ್‌ಫಾರಂ ನಂಬರ್ 12ರಲ್ಲಿ ಆಗಮಿಸಲಿದೆ ಎಂದು ಘೋಷಿಸಲಾಯಿತು. ಇದಕ್ಕೂ ಮುಂಚೆ ಇನ್ನೊಂದು ವಿಶೇಷ ರೈಲು ಇದೇ ಪ್ಲಾಟ್‌ಫಾರಂ ಮೂಲಕ ತೆರಳಿತ್ತು.

ಆಗ ಪ್ಲಾಟ್‌ಫಾರಂ 14ರಲ್ಲಿ ಕಾಯುತ್ತಿದ್ದ ಪ್ರಯಾಣಿಕರು ತಮ್ಮ ರೈಲು ಪ್ಲಾಟ್‌ಫಾರಂ 12 ರಲ್ಲಿ ಬರುತ್ತಿದೆ ಎಂದು ಭಾವಿಸಿದರು. (4ನೇ ಪುಟಕ್ಕೆ)

### ಕುಂಭಮೇಳದ ವಿಶೇಷ ರೈಲಿನ ಕಿಟಕಿಗಳು ಧ್ವಂಸ

**ಅಮೇಥಿ, ಫೆ. 16 - ಮಹಾಕುಂಭ ಮೇಳಕ್ಕೆ ತೆರಳುವ ವಿಶೇಷ ರೈಲಿನಲ್ಲಿ ಪ್ರಯಾಣಿಸಲು ಅವಕಾಶ ಸಿಗದ ಕಾರಣ ಆಕ್ರೋಶಕೊಂಡ ಕೆಲವರು ಎರಡು ಬೋಗಿಗಳ ಕಿಟಕಿಗಳನ್ನು ಧ್ವಂಸಗೊಳಿಸಿದ ಘಟನೆ ಗುರು ಗೋರಕ್‌ನಾಥ್ ಧಾಮ ರೈಲ್ವೆ ನಿಲ್ದಾಣದಲ್ಲಿ ನಡೆದಿದೆ.**

**ಭಾನುವಾರ ಬೆಳಗಿನ ಜಾವ 1.15 ಗಂಟೆ ಸಮಯದಲ್ಲಿ ಕುಂಭ ವಿಶೇಷ ರೈಲು ನಿಲ್ದಾಣಕ್ಕೆ ಬಂದಿತ್ತು. ಸುಮಾರು 300 ಭಕ್ತರು ರೈಲಿಗಾಗಿ ಕಾಯುತ್ತಿದ್ದರು.**

**ಆದರೆ ಪ್ರಯಾಣಿಕರು ಒಳಗಿನಿಂದ ಬಾಗಿಲು ಹಾಕಿಕೊಂಡು ಹೊಸ ಪ್ರಯಾಣಿಕರಿಗೆ ಬರಲು ಅವಕಾಶ ನೀಡಲಿಲ್ಲ. ಇದರಿಂದ ಕುಪಿತಕೊಂಡ ಕೆಲವರು ಎರಡು ಬೋಗಿಗಳ ಹತ್ತಾರು ಕಿಟಕಿಗಳ ಗಾಜುಗಳನ್ನು ಒಡೆದಿದ್ದಾರೆ.**

**ಈ ಘಟನೆಯಲ್ಲಿ ಹಲವರಿಗೆ ಗಾಯಗಳಾಗಿವೆ. ಈ ಕೃತ್ಯದಲ್ಲಿ ಭಾಗಿಯಾದವರನ್ನು ಗುರುತಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ರೈಲ್ವೆ ಪೊಲೀಸರು ಹೇಳಿದ್ದಾರೆ.**

## ಪಂಚಾಯ್ತಿಗಳಿಗೆ ಅಧಿಕಾರದಲ್ಲಿ ಕರ್ನಾಟಕ ಪ್ರಥಮ: ಸಿಎಂ



ಬೆಂಗಳೂರು, ಫೆ. 16 - ಪಂಚಾಯಿತಿಗಳಿಗೆ ಅಧಿಕಾರ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಹಾಗೂ ಪಂಚಾಯತ್ ರಾಜ್ ಸಚಿವಾಲಯ ನಡೆಸಿದ ಸಮೀಕ್ಷೆ ತಿಳಿಸಿದೆ.

ಈ ವಿಷಯ ತಿಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸರ್ಕಾರ ಬೇರು ಮಟ್ಟದಲ್ಲಿ ಪ್ರಜಾಪ್ರಭುತ್ವ ಬೆಳೆಸಲು ಬದ್ಧವಾಗಿದೆ. ಇದಕ್ಕೆ ಸಮೀಕ್ಷೆ ಮಾನ್ಯತೆ ನೀಡಿದೆ ಎಂದಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ಅವರ ನೇತೃತ್ವದಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಪಂಚಾಯಿತಿಗಳಿಗೆ ಸಂಪನ್ಮೂಲ ಹಾಗೂ ಸ್ವಾಯತ್ತತೆ ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರೀಕರಣ ಕೇವಲ ಪರಿಕಲ್ಪನೆಯಲ್ಲ. (4ನೇ ಪುಟಕ್ಕೆ)

## ಭಾರತದಲ್ಲಿನ ಮತದಾನಕ್ಕಾಗಿ ಅಮೆರಿಕದ ಹಣ: ಬಿಜೆಪಿ ತರಾಟೆ

ನವದೆಹಲಿ,ಫೆ.16 - ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ, ಭಾರತದಲ್ಲಿ ಮತದಾನ ಬಲಗೊಳಿಸಲು ಅಮೆರಿಕ ಅನುದಾನ ನೀಡುತ್ತಿದ್ದ ಯೋಜನೆ ಜಾರಿಗೆ ಬಂದಿತ್ತು ಎಂದು ಬಿಜೆಪಿ ಆರೋಪಿಸಿದೆ.

**ಭಾರತವನ್ನು ದುರ್ಬಲಗೊಳಿಸಲು ಪ್ರತಿಯೊಂದು ಅವಕಾಶ ಬಳಸುತ್ತಿದ್ದ ಶಕ್ತಿಗಳಿಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ವ್ಯವಸ್ಥಿತವಾಗಿ ದಾರಿ ಮಾಡಿಕೊಟ್ಟಿತ್ತು.**
**- ಅಮಿತ್ ಮಾಳವೀಯ**
**ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ**

ಎಲಾನ್ ಮಸ್ಕ್ ಅವರ ನೇತೃತ್ವದ ಅಮೆರಿಕದ ದಕ್ಷತಾ ಇಲಾಖೆಯು ಭಾರತದಲ್ಲಿ ಮತದಾನ ಬಲಗೊಳಿಸಲು ನೀಡಲಾಗುತ್ತಿದ್ದ 21 ದಶಲಕ್ಷ ಡಾಲರ್ ಅನುದಾನ ಕಡಿತಗೊಳಿಸಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ದೇಶ ವಿರೋಧಿ ಹಿತಗಳಿಗೆ ಭಾರತೀಯ ಸಂಸ್ಥೆಗಳಲ್ಲಿ ದಾರಿ ಮಾಡಿಕೊಡಲಾಗಿತ್ತು ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸ್ ನಾಯಕರಾದ ಗಾಂಧಿಗಳ ಸಹಚರನಾದ ಅಮೆರಿಕದ ಹೂಡಿಕೆದಾರ ಜಾರ್ಜ್ ಸೊರೊಸ್ ನಮ್ಮ ಚುನಾವಣಾ ಪ್ರಕ್ರಿಯೆ ಮೇಲೆ ಪ್ರಭಾವ ಬೀರಿದ್ದಾಗಿ ಮಾಳವೀಯ ಹೇಳಿದ್ದಾರೆ. 2012ರಲ್ಲಿ ಸೊರೊಸ್ ಅವರ ಓಪನ್ ಸೊಸೈಟಿ ಫೌಂಡೇಶನ್ ಜೊತೆ ಸಂಪರ್ಕ ಹೊಂದಿದ್ದ ಇಂಟರ್‌ನ್ಯಾಷನಲ್ ಫೌಂಡೇಶನ್ ಫಾರ್ ಎಲೆಕ್ಟ್ರಿಕಲ್ ಸಿಸ್ಟಮ್ಸ್ ಜೊತೆಗೆ ಚುನಾವಣಾ ಆಯೋಗ ಒಪ್ಪಂದ ಮಾಡಿಕೊಂಡಿತ್ತು. ಯುಎಸ್‌ಎಡ್ ಮೂಲಕ ಈ ಹಣ ಒದಗಿಸಲಾಗುತ್ತಿತ್ತು ಎಂದು (4ನೇ ಪುಟಕ್ಕೆ)

## ಚಿರತೆಯಿಂದ ರಕ್ಷಣೆಗೆ ಕುತ್ತಿಗೆ ಪಟ್ಟಿ, ಸೌರ ಬೇಲಿ



ಪುಣೆ,ಫೆ. 16 - ಮಹಾರಾಷ್ಟ್ರದ ಪುಣೆ ಭಾಗದಲ್ಲಿ ಚಿರತೆಗಳಿಂದ ಜನರನ್ನು ರಕ್ಷಿಸಲು ಎಐ ತಂತ್ರಜ್ಞಾನ ಹೊಂದಿರುವ ಕ್ಯಾಮರಾ ಹಾಗೂ ವಿಶೇಷ ಕುತ್ತಿಗೆ ಪಟ್ಟಿ ಸೇರಿದಂತೆ ಹಲವು ಮಾರ್ಗಗಳನ್ನು ಅನುಸರಿಸಲಾಗುತ್ತಿದೆ.

ಇಲ್ಲಿನ ಜುನ್ನಾರ್ ಪ್ರದೇಶದಲ್ಲಿ ಕಳೆದ ಒಂದು ವರ್ಷದಲ್ಲಿ ಚಿರತೆಯಿಂದ 9 ಜನರು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪುಣೆ ಜಿಲ್ಲೆಯ ಉತ್ತರದಲ್ಲಿರುವ ಬೆಟ್ಟಗಳ ಪ್ರದೇಶದಲ್ಲಿ ಕೃಷಿಗೆ ವಾತಾವರಣ ಅನುಕೂಲವಾಗಿದೆ. ಆದರೆ ಈ ಪ್ರದೇಶ ಚಿರತೆಗಳ ನೆಲೆಯೂ ಆಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ಚಿರತೆಗಳ ದಾಳಿಯಿಂದ ಜುನ್ನಾರ್ ಅರಣ್ಯ ವಲಯದಲ್ಲಿ 17 ಸಾವುಗಳು ಸಂಭವಿಸಿವೆ. 2024 ಒಂದರಲ್ಲೇ 9 ಜನ ಸಾವನ್ನಪ್ಪಿದ್ದಾರೆ. ಐದು ವರ್ಷಗಳಲ್ಲಿ ಚಿರತೆ ದಾಳಿಗೆ 41 ಜನ ಗಾಯಗೊಂಡಿದ್ದಾರೆ.

ಈ ಪ್ರದೇಶದ 233 ಹಳ್ಳಿಗಳು ಚಿರತೆ ಸಮಸ್ಯೆ ಎದುರಿಸುತ್ತಿವೆ. ಈ ಭಾಗದ ಅರಣ್ಯಗಳಲ್ಲಿ ಪ್ರತಿ ನೂರು ಚದುರ (4ನೇ ಪುಟಕ್ಕೆ)

## ಅಮೆರಿಕದ ಇನ್ನೊಂದು ವಿಮಾನದಲ್ಲಿ ಅಕ್ರಮ ವಲಸಿಗರ ಹಸ್ತಾಂತರ

ಚಂಡೀಘಡ, ಫೆ. 16 - ಭಾರತದ 116 ಅಕ್ರಮ ವಲಸಿಗರನ್ನು ಅಮೆರಿಕದ ಸೈನಿಕ ವಿಮಾನದಲ್ಲಿ ವಾಪಸ್ ಕಳಿಸಲಾಗಿದೆ. ವಿಮಾನ ಶನಿವಾರ ತಡರಾತ್ರಿ ಅಮೃತ್‌ಸರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ.

ಶನಿವಾರ ರಾತ್ರಿ 11:35 ರ ಸಮಯದಲ್ಲಿ ವಿಮಾನ ಬಂದಿಳಿದಿತ್ತು. ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾದ ನಂತರ ವಲಸಿಗರನ್ನು ಕಳಿಸಲಾದ ಎರಡನೇ ವಿಮಾನ ಇದಾಗಿದೆ. ಮೂರನೇ ವಿಮಾನ 157 ಜನರೊಂದಿಗೆ ಭಾನುವಾರ ಬರಲಿದೆ ಎಂದು ಮೂಲಗಳು ತಿಳಿಸಿವೆ.

## ಮಹಾಕುಂಭದಲ್ಲಿ ಹೆಚ್ಚಿದ ಜನಸಾಗರ

ಮಹಾಕುಂಭ ನಗರ, ಫೆ. 16 - ಕುಂಭಮೇಳದ ಹಿನ್ನೆಲೆಯಲ್ಲಿ ಕೆಲವು ಅಹಿತಕರ ಘಟನೆಗಳು ನಡೆದಿದ್ದರೂ ಸಹ ಕುಂಭಮೇಳಕ್ಕೆ ಬರುವ ಜನರ ಸಂಖ್ಯೆ ಹೆಚ್ಚಿನ ಹಂತದಲ್ಲಿಯೇ ಮುಂದುವರೆದಿದೆ.

ಭಾನುವಾರ ಸಂಗಮದಲ್ಲಿ ಸಂಜೆ 6 ರವರೆಗೆ 1.36 ಕೋಟಿ ಜನರು ಪವಿತ್ರ ಸ್ನಾನ ಮಾಡಿದ್ದರು.

ಜನವರಿ 13ರಂದು ಕುಂಭ ಮೇಳದ ಆರಂಭದಿಂದ ಇದುವರೆಗೆ 52.83 ಕೋಟಿ ಜನರು ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಸರ್ಕಾರದ ಅಂಕಿ ಅಂಶಗಳು ತಿಳಿಸಿವೆ.

## ಬಂಗಾರದ ಗಣಿ ಕುಸಿದು 42 ಸಾವು

ಬಮಾಕು (ಮಾಲಿ), ಫೆ. 16 - ಮಾಲಿ ದೇಶದ ಪೂರ್ವ ಭಾಗದಲ್ಲಿ ಬಂಗಾರದ ಗಣಿಯೊಂದು ಕುಸಿದು 42 ಜನ ಸಾವನ್ನಪ್ಪಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಪಶ್ಚಿಮ ಆಫ್ರಿಕಾದ ಮಾಲಿ ದೇಶದಲ್ಲಿ ಈ ವರ್ಷ ನಡೆದ ಎರಡನೇ ಪ್ರಮುಖ ಅಪಘಾತ ಇದಾಗಿದೆ. ಮಾಲಿ ದೇಶವು ಆಫ್ರಿಕಾದ ಪ್ರಮುಖ ಮೂರು ಬಂಗಾರ ಉತ್ಪಾದನಾ ದೇಶಗಳಲ್ಲಿ ಒಂದಾಗಿದೆ.

### ರಾಮಗಿರಿ ಗ್ರಾಮದ ರಾಮಪ್ಪ ಜಿ. ನಿಧನ



ದಾವಣಗೆರೆ ಸಿಟಿ ಡೋ.ನಂ. 4000/2B, 2ನೇ ಮೇನ್, 12ನೇ ಕ್ರಾಸ್, ವಿನೋಬನಗರ ವಾಸಿ ದಿ. ಪರಶುರಾಮಪ್ಪನರವರ ಪುತ್ರ

**ರಾಮಪ್ಪ ಜಿ.**

(ಸ್ವಾಮಿ ವೈನ್ಸ್ ಮಾಲೀಕರು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ರಾಮಗಿರಿ ಗ್ರಾಮ)

ಇವರು, ದಿನಾಂಕ : 16.02.2025ರ ಭಾನುವಾರ ಬೆಳಿಗ್ಗೆ 6.30ಕ್ಕೆ ನಿಧನರಾದರು. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.02.2025ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : 99005 16143, 97384 17717

### ಶಕುಂತಲಾ ಪಾಂಡುರಂಗ ರೇವಣಕರ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, 7ನೇ ಮೇನ್ ವಾಸಿ, ದಿ. ನಲ್ಲೂರು ಪಾಂಡುರಂಗ ಎನ್. ರೇವಣಕರ್ ರವರ ಧರ್ಮಪತ್ನಿ

**ಶ್ರೀಮತಿ ಶಕುಂತಲಾ ಪಾಂಡುರಂಗ ರೇವಣಕರ್**

ಇವರು ದಿನಾಂಕ 16.02.2025 ಭಾನುವಾರ ಬೆಳಿಗ್ಗೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಇವರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.02.2025ರ ಭಾನುವಾರ ಮಧ್ಯಾಹ್ನ 1:30 ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬದವರು :

ಶ್ರೀಮತಿ ಮತ್ತು ಶ್ರೀ ನಲ್ಲೂರು ರಾಜೇಶ್ ರೇವಣಕರ್
ಶ್ರೀಮತಿ ಮತ್ತು ಶ್ರೀ ನಲ್ಲೂರು ಸಂತೋಷ್ ರೇವಣಕರ್
ಹಾಗೂ ನಲ್ಲೂರು ಕುಟುಂಬದವರು
ನಲ್ಲೂರು ವಿಶ್ವಾಸ್ ಜ್ಯೂಯಲರ್ಸ್
ನಲ್ಲೂರು ಪಾಂಡುರಂಗ ಜ್ಯೂಯಲರ್ಸ್




# ಕೊಟ್ಟೂರಿನಲ್ಲಿ ಬೀಡು ಬಿಟ್ಟಿದ್ದ ಕೋತಿಗಳ ಸೆರೆ



ಕೊಟ್ಟೂರು, ಫೆ.16- ನಗರದಲ್ಲಿ ಬೀಡು ಬಿಟ್ಟಿದ್ದ ಕೋತಿಗಳ ಕಪಿ ಚೇಷ್ಟೆಗೆ ಪಟ್ಟಣ ಪಂಚಾಯಿತಿ ಎಚ್ಚೆತ್ತುಕೊಂಡು, ಅವುಗಳನ್ನು ಸೆರೆ ಹಿಡಿದು ಅರಣ್ಯ ಇಲಾಖೆಗೆ ಒಪ್ಪಿಸುವ ಮೂಲಕ ಸಾರ್ವಜನಿಕ ಹಿತ ಕಾಪಾಡಿದೆ.

ನಗರದಲ್ಲಿ ವಿವಿಧೆಡೆ ಕೋತಿಗಳ ಉಪಟಳ ಹೆಚ್ಚಾಗಿದ್ದರಿಂದ ಊರಿನ ಜನರು ಮನೆಯಿಂದ ಹೊರಬರಲು ಭಯ ಪಡುವಂತಾಗಿತ್ತು. ಬಸ್ ನಿಲ್ದಾಣ, ಶಾಲೆ ಹಾಗೂ ಮುಖ್ಯ ರಸ್ತೆಗಳಲ್ಲಿ ಸಂಚರಿಸುವ ವೃದ್ಧರು, ಮಹಿಳೆಯರು ಹಾಗೂ ಮಕ್ಕಳ ಮೇಲೆ ದಾಳಿ ನಡೆಸಿ ಗಾಯ ಗೊಳಿಸಿದ ಘಟನೆಗಳು ನಡೆದಿವೆ.

ಕೋತಿಗಳ ಹಾವಳಿಗೆ ಬೇಸತ್ತ ಜನರು, ಇವುಗಳ ನಿಯಂತ್ರಕ್ಕಾಗಿ ದೂರು ನೀಡಿದ ತಕ್ಷಣವೇ ಪಟ್ಟಣ ಪಂಚಾಯತಿ ಎಚ್ಚೆತ್ತುಕೊಂಡು ಕ್ರಮ ಕೈಗೊಂಡಿತು.

ಬೈರ ದೇವರಗುಡ್ಡ ಗ್ರಾಮದ ನಾಗೇಂದ್ರಪ್ಪ ಹಾಗೂ ಅರಣ್ಯ ಸಿಬ್ಬಂದಿ ಸುರೇಶ್, ಮಂಜುನಾಥ್ ಮತ್ತು ಸಂಸ್ಥೆಯ ಸಿಬ್ಬಂದಿ ನೆರವಿನೊಂದಿಗೆ 20ಕ್ಕೂ ಅಧಿಕ ಮಂಗಳನ್ನು ಸೆರೆ ಹಿಡಿಯಲಾಯಿತು.

'ನಗರದಲ್ಲಿ ಮಂಗಗಳ ಚೇಷ್ಟೆಗಳಿಂದಾಗಿ ನಾಗರಿಕರು ಓಡಾಡುವುದು ದುಸ್ತರವಾಗಿತ್ತು, ಹಾಗಾಗಿ ಕೋತಿಗಳನ್ನು ಬಂಧಿಸಿ ಕಮಲಾಪುರ ಅರಣ್ಯದಲ್ಲಿ ಬಿಡಲಾಗುವುದು' ಎಂದು ಪ.ಪಂ ಮುಖ್ಯಾಧಿಕಾರಿ ನಸ್ರುಲ್ಲಾ ತಿಳಿಸಿದರು.

ಮಂಗಗಳನ್ನು ಬಂಧಿಸಿದ ನಾಗೇಂದ್ರಪ್ಪ ಮತ್ತು ಅರಣ್ಯ ಇಲಾಖೆಯ ಸುರೇಶ್ ಅವರಿಗೆ ಗ್ರಾಮದ ಮುಖಂಡರು ಹಾಗೂ ಪಟ್ಟಣ ಪಂಚಾಯತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

## 19 ರಿಂದ ನಡೆಯಬೇಕಿದ್ದ ಕೃಷಿ ಉತ್ಸವ ಮುಂದೂಡಿಕೆ

ದಾವಣಗೆರೆ, ಫೆ.16- ಹಸಿರೋತ್ಸವ ಫೋರಮ್‌ನಿಂದ ಇದೇ ದಿನಾಂಕ 19ರಿಂದ 23ರವರೆಗೆ ನಿಗದಿಯಾಗಿದ್ದ ಕೃಷಿ ಉತ್ಸವವನ್ನು ಮುಂದೂಡಲಾಗಿದೆ.

# ಮಳಿಗೆಗಳಿಂದ ಆಗಿರುವ ಹಾನಿಗೆ ಅಧಿಕಾರಿಗಳೇ ಹೊಣೆ

## ಹರಿಹರ ನಗರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷೆ ಕವಿತಾ ಮಾರುತಿ ಎಚ್ಚರಿಕೆ

ಹರಿಹರ, ಫೆ. 16 - ಇಲ್ಲಿನ ನಗರಸಭೆಯ 2025-26ನೇ ಸಾಲಿನ ಆಯ ವ್ಯಯದ 2ನೇ ಹಂತದ ಸಾರ್ವಜನಿಕ ಸಮಾಲೋಚನಾ ಸಭೆ ನಡೆಯಿತು.

ಸಭೆಗೆ ಆಗಮಿಸಿದ್ದ ನಗರದ 31ನೇ ವಾರ್ಡಿನ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ನೇಕಾರ ಬಡಾವಣೆ, ಭಾರತ್ ಆಯಿಲ್ ಮಿಲ್ ಕಾಂಪೌಂಡ್, ಫುಟ್‌ಪಾತ್ ವ್ಯಾಪಾರಿಗಳು ತಮ್ಮ ಸಲಹೆ, ಸೂಚನೆಗಳನ್ನು ನೀಡಿದರು.

2ನೇ ವಾರ್ಡಿನ ನಿವಾಸಿ ಪಂಚಾಕ್ಷರಿ ಮಾತನಾಡಿ, ನಗರದಾದ್ಯಂತ ಹಿರಿಯ ನಾಗರಿಕರ, ವಿಕಲಚೇತನರ, ಶಾಲಾ ಮಕ್ಕಳು ಸೇರಿದಂತೆ ಪಾದಚಾರಿಗಳಿಗೆ ಮೀಸಲಾಗಿರುವ ಫುಟ್‌ಪಾತನ್ನು ರಸ್ತೆ ಬದಿ ವ್ಯಾಪಾರಸ್ಥರು ಅತಿಕ್ರಮಿಸಿರುವ ಕಾರಣ, ವಾಹನಗಳ ಸಂಚಾರಕ್ಕೆ, ಪಾದಚಾರಿಗಳ ಓಡಾಟಕ್ಕೆ ತುಂಬಾ ತೊಂದರೆಯಾಗಿದ್ದು, ಹಾಗಾಗಿ ನಿತ್ಯ ಸಣ್ಣ-ಪುಟ್ಟ ಅಪಘಾತಗಳು ನಡೆಯುತ್ತವೆ.

ನಗರದ ರಚನಾ ಕ್ರೀಡಾ ಕ್ಲಬ್ ಪಕ್ಕದಲ್ಲಿ ನಗರ ಸಭೆಯಿಂದ 32 ಸಣ್ಣ-ಸಣ್ಣ ಮಳಿಗೆಗಳನ್ನು



ನಿರ್ಮಿಸಿದ್ದು, ಅವುಗಳಿಂದ ನಗರಸಭೆಗೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆ. ಆದಷ್ಟು ಬೇಗ ಆ ಎಲ್ಲಾ ವಾಣಿಜ್ಯ ಮಳಿಗೆಗಳನ್ನು ನಿಯಮನುಸಾರ ಹರಾಜು ಮಾಡಿ ನಗರಸಭೆಗೆ ಆಗುತ್ತಿರುವ ಆರ್ಥಿಕ ನಷ್ಟವನ್ನು ತಪ್ಪಿಸಬೇಕು ಎಂದರು.

ಎಂ. ಬಿ. ಅಣ್ಣಪ್ಪ ಮಾತನಾಡಿ, ಜಲಸಿರಿ ಯೋಜನೆ ಅಡಿಯಲ್ಲಿ ದಿನದ 24 ಗಂಟೆ ಕುಡಿಯುವ ನೀರು ಸರಬರಾಜಿನ ನಲ್ಲಿಗಳ ನೀರಿನ ಬಿಲ್ ಅಧಿಕ ಪ್ರಮಾಣದಲ್ಲಿ ಬಂದಿರುವುದು ವಿಪರ್ಯಾಸದ ಸಂಗತಿಯಾಗಿದೆ. ಈ ಕುರಿತು ಅಧಿಕಾರಿಗಳು ವ್ಯತ್ಯಾಸ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಬೀದಿ ಬದಿ ವ್ಯಾಪಾರಸ್ಥರ ಸಂಘದ ಕಾರ್ಯದರ್ಶಿ ಮಂಜುಳಾ ಮಾತನಾಡಿ, ನಗರದಾದ್ಯಂತ ಬೀದಿ ಬದಿಯಲ್ಲಿ ಕುಳಿತು ವ್ಯಾಪಾರ ವಹಿವಾಟು ನಡೆಸುತ್ತಿರುವ ಬಡ-ನಿರ್ಗತಿಕ ವ್ಯಾಪಾರಸ್ಥರ ಕಲ್ಯಾಣಕ್ಕಾಗಿ ವ್ಯಾಪಾರ ಕೇಂದ್ರ ಸ್ಥಾಪಿಸುವಲ್ಲಿ ನಗರಸಭೆ ವಿಫಲಗೊಂಡಿದೆ ಎಂದು ಆರೋಪಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ ಮಾತನಾಡಿ, ಅಧಿಕಾರಿಗಳು, ಸಾರ್ವಜನಿಕರು ತಿಳಿಸುವ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಿ, ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡು ಹಿಡಿಯಲು ಮುಂದಾಗಿರಿ. ನಗರಸಭೆಗೆ ಆದಾಯ ತರುವ ಮಳಿಗೆಗಳನ್ನು ಹರಾಜು ಮಾಡಲು ಏಕೆ ಮುಂದಾಗುತ್ತಿಲ್ಲ. ವಾಣಿಜ್ಯ ವ್ಯವಹಾರಕ್ಕಾಗಿ ನಿರ್ಮಿಸಿರುವ ಮಳಿಗೆಗಳಿಂದ ನಗರಸಭೆಗೆ ಆಗಿರುವ ಹಾನಿಗೆ ಅಧಿಕಾರಿಗಳೇ ಹೊಣೆ ಆಗಬೇಕಾಗುತ್ತದೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶ್ರೇಷ್ಠಿ ಸ್ವಾಗತಿಸಿದರು. ಸದಸ್ಯರಾದ ಹನುಮಂತಪ್ಪ ಆಟೋ, ದಾದಾ ಖಲಂದರ್, ಸೈಯದ್ ಅಲೀಮ್, ನಾಗರತ್ನಮ್ಮ, ಆರ್.ಸಿ ಜಾವಿದ್, ಕೆ. ಬಿ ರಾಜಶೇಖರ್, ಸಂತೋಷ ದೊಡ್ಮನಿ, ಮುಖಂಡರಾದ ನಿಜಗುಣ, ತಿಪ್ಪೇಶ ದಾವಣಗೆರೆ, ಕಾರ್ಮಿಕ ಮುಖಂಡ ಕೊಟ್ರಪ್ಪ, ಪ್ರವೀಣ್ ಕುಮಾರ್, ದಾದಾಪೀರ್ ಭಾನುವಳ್ಳಿ, ಹಿರಿಯ ನಾಗರಿಕರು, ಸಂಘ ಸಂಸ್ಥೆಗಳ ಮುಖಂಡರು, ಮಹಿಳಾ ಸಂಘಟನೆಗಳ ಮುಖ್ಯಸ್ಥರು, ಹಾಲಿ-ಮಾಜಿ ಸದಸ್ಯರು ತಮ್ಮ ಸಲಹೆ, ಸೂಚನೆಗಳನ್ನು ನೀಡಿದರು.

## ಹರಿಹರೇಶ್ವರ ಸ್ವಾಮಿ ದೇವಸ್ಥಾನ ಸ್ವಚ್ಛಗೊಳಿಸಿದ ನಗರಸಭೆ ಸಿಬ್ಬಂದಿ



ಹರಿಹರ, ಫೆ.16- ನಗರದಲ್ಲಿ ದಿನಾಂಕ 12 ರಂದು ನಡೆದ ಇತಿಹಾಸ ಪ್ರಸಿದ್ಧ ಹರಿಹರೇಶ್ವರ ಸ್ವಾಮಿ ರಥೋತ್ಸವದ ವೇಳೆ ಸಾರ್ವಜನಿಕರು ಮತ್ತು ಅಂಗಡಿ ಮುಂಗಟ್ಟುದಾರರು, ದೇವಸ್ಥಾನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಸವನ್ನು ಹರಡಿ ಹೋಗಿರುವುದನ್ನು ನಗರಸಭೆಯ ಸಿಬ್ಬಂದಿಗಳು ಸ್ವಚ್ಛತೆ ಮಾಡುವ ಮೂಲಕ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಅರ್ಚಕರಾದ ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್, ನಗರಸಭೆ ಸಿಬ್ಬಂದಿಗಳು, ದೇವಸ್ಥಾನದ ಸಿಬ್ಬಂದಿಗಳು ಹಾಜರಿದ್ದರು.

## ಬಿಎಸ್ಸೆನ್ನೆಲ್ 4ಜಿ ಸಿಮ್ ಅಪ್‌ಗ್ರೇಡ್

ದಾವಣಗೆರೆ, ಫೆ.16- ಬಿಎಸ್ಸೆನ್ನೆಲ್ ತನ್ನ ನೆಟ್‌ವರ್ಕ್ ಅನ್ನು 4ಜಿ ಗೆ ಅಪ್ ಗ್ರೇಡ್ ಮಾಡಲಾಗಿದೆ. ವೇಗವಾದ ಇಂಟರ್‌ನೆಟ್ ಸುಧಾರಿತ ಸಂಪರ್ಕ ಮತ್ತು ಹೆಚ್ಚು ವಿಶ್ವಾಸಾರ್ಹ ಸೇವೆಯನ್ನು ಒದಗಿಸಲಾಗುತ್ತದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ಸಂಪರ್ಕವನ್ನು ಅನುಭವಿಸಬಹುದು. 4ಜಿ ವೇಗದ ಅನುಭವಕ್ಕಾಗಿ ಎಲ್ಲಾ ಬಿಎಸ್ಸೆನ್ನೆಲ್ ಗ್ರಾಹಕರು ನಿಮ್ಮ ಆಸ್ತಿತ್ವದಲ್ಲಿರುವ 2ಜಿ, 3ಜಿ ಸಿಮ್‌ನ್ನು 4ಜಿ ಸಿಮ್‌ಗೆ ಯಾವುದೇ ಬಿಎಸ್ಸೆನ್ನೆಲ್ ಕಚೇರಿಯಲ್ಲಿ ಅಥವಾ ರಿಟೇಲರ್‌ಗಳ ಅಂಗಡಿಯ ಬಳಿ ಉಚಿತವಾಗಿ ಅಪ್‌ಗ್ರೇಡ್ ಮಾಡಿ ಎಂದು ಡಿಜಿಎಂ ತಿಳಿಸಿದ್ದಾರೆ.

# ಹಳೇ ಕುಂದುವಾಡದಲ್ಲಿ ಇಂದು ದೇವಸ್ಥಾನ ಉದ್ಘಾಟನೆ, ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ

ದಾವಣಗೆರೆ, ಫೆ.16- ತಾಲ್ಲೂಕಿನ ಹಳೇಕುಂದುವಾಡ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಮತ್ತು ಶ್ರೀ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಶಿಲಾಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ಫೆಬ್ರವರಿ 13ರಿಂದ 17ರವರೆಗೆ 5 ದಿನಗಳ ಕಾಲ ನಡೆಯಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ, ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಹೆಚ್.ಜಿ.ಗಣೇಶಪ್ಪ ಅವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಳೆ ದಿನಾಂಕ 17ರ ಸೋಮವಾರ ಬೆಳಿಗ್ಗೆ 11ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಸಾನ್ನಿಧ್ಯವನ್ನು ಸಿರಿಗೆರೆ ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀಗಳು, ಕಾಗಿನೆಲೆ ಮಹಾಸಂಸ್ಥಾನ ಶ್ರೀ ಕನಕ ಗುರುಪೀಠದ ನಿರಂಜನಾನಂದಪುರಿ ಶ್ರೀಗಳು, ಹೊಸದುರ್ಗದ ಶ್ರೀ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿ, ದಾವಣಗೆರೆಯ ಶ್ರೀ ಮುರುಘ ರಾಜೇಂದ್ರ ಮಠದ ಬಸವಪ್ರಭು ಶ್ರೀಗಳು, ಹದಡಿಯ ಚಂದ್ರಗಿರಿ ಮಠದ ಪರಮಹಂಸ ಶ್ರೀ ಮುರಳೀಧರ ಶ್ರೀಗಳು, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಶ್ರೀಗಳು, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠ ಮಹಾಸಂಸ್ಥಾನದ ಪ್ರಸನ್ನಾನಂದಪುರಿ ಶ್ರೀಗಳು, ಶ್ರೀ ಕ್ಷೇತ್ರ ಅವರಗೊಳ್ಳದ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು, ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಶ್ರೀಗಳು, ಚಿತ್ರದುರ್ಗದ ಮಾಚಿದೇವ



ಮಹಾಸಂಸ್ಥಾನ ಮಠದ ಬಸವ ಮಾಚಿದೇವ ಶ್ರೀಗಳು, ಹೊಸದುರ್ಗ ಭಗೀರಥ ಪೀಠದ ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನದ ಪುರುಷೋತ್ತಮಾನಂದಪುರಿ ಶ್ರೀಗಳು, ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವ ನಾಗಿದೇವ ಶ್ರೀಗಳು, ಹಳೇಕುಂದುವಾಡದ ಕರಿಬಸವೇಶ್ವರ ದೇವಸ್ಥಾನದ ಧರ್ಮಾಧಿಕಾರಿ ರಾಜಣ್ಣ ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಸಂಸದೆ ಡಾ.ಪ್ರಭಾ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಕೇಂದ್ರ ಸಚಿವ ಜಿ. ಎಂ.ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ.ರವೀಂದ್ರನಾಥ ಸೇರಿದಂತೆ ಶಾಸಕರು, ಮಾಜಿ ಶಾಸಕರು, ಜನಪ್ರತಿನಿಧಿಗಳು, ಮುಖಂಡರು, ದಾನಿಗಳು, ಅಧಿಕಾರಿಗಳು, ಗ್ರಾಮಸ್ಥರು ಸೇರಿದಂತೆ ಅಪಾರ ಭಕ್ತ ಗಣ ಆಗಮಿಸಲಿದೆ..ಗ್ರಾಮದ ಬಸವ ಆಂಜನೇಯ ಡೊಳ್ಳು ಸಂಘ ಡೊಳ್ಳಿನ ಸದ್ದು ಮಾಡಲು ಸಿದ್ದವಾಗಿದೆ, ಜೊತೆಗೆ 18ರಂದು ಹಳೇ ಕುಂದುವಾಡ ಗ್ರಾಮದಲ್ಲಿ 'ಸಾವು ತಂದ ಸೌಭಾಗ್ಯ' ನಾಟಕ ಪ್ರದರ್ಶನವಾಗಲಿದೆ ಎಂದರು.

ಸಮಾರಂಭದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ 41 ದಿನಗಳ ಕಾಲ ಮದ್ಯ, ಮಾಂಸ ಮಾರಾಟ, ಸೇವನೆ ಸಂಪೂರ್ಣವಾಗಿ ನಿಷೇಧ ಮಾಡಲಾಗಿದ್ದು ಕಟ್ಟು ನಿಟ್ಟಿನ ಪಾಲನೆ ಮಾಡಲಾಗುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಮೇಯರ್ ಹೆಚ್ ಎನ್ ಗುರುನಾಥ್, ಹಿರಿಯ ಮುಖಂಡರಾದ ಹೆಚ್.ಜಿ ದೊಡ್ಡಪ್ಪ, ಗೌಡ್ರು ಬಸವರಾಜಪ್ಪ, ಸಿದ್ದನಗೌಡ್ರು, ಚನ್ನಬಸಪ್ಪ ಗೌಡ್ರು, ಹೆಚ್.ಬಿ. ಅಣ್ಣಪ್ಪ, ಜೆ ಮಾರುತಿ, ಬಾರಿಕರ ಚಂದ್ರಪ್ಪ, ನರಸಪ್ಪರ ಶಿವಪ್ಪ, ಮಿಟ್ಟಕಟ್ಟೆ ಚಂದ್ರಪ್ಪ, ಬೆಳ್ಳೂಡಿ ಬಸಣ್ಣ,,ಯು ವಿ ಶ್ರೀನಿವಾಸ್, ಡಿಎಸ್ ಎಸ್ ಮಂಜುನಾಥ್, ಹೆಚ್.ಎಸ್.ಶ್ರೀನಿವಾಸ್, ತಡಿಕೆಪ್ಪರ್ ನಿಂಗಪ್ಪ, ಹೆಚ್ ಎಸ್ ಉಮಾಪತಿ, ದಯಾನಂದ್, ಜೆಸಿ ದೇವರಾಜ್, ಎನ್ ಟಿ ನಾಗರಾಜ್, ಜಿ.ಹೆಚ್.ಗಣೇಶ್, ಎಸ್.ಬಿ. ವಿಜಯ್, ದೇವಸ್ಥಾನ ಸಮಿತಿ ಸದಸ್ಯರು, ಡೊಳ್ಳಿನ ಸಂಘದ ಸದಸ್ಯರು ಸೇರಿದಂತೆ ಇತರರಿದ್ದರು.

## ಬೆಳ್ಳೂಡಿ : ಮಗನ ಹುಟ್ಟುಹಬ್ಬದ ಅಂಗವಾಗಿ ಶಾಲೆಗೆ ಕೊಡುಗೆ ನೀಡಿದ ತಂದೆ



ಮಲೇಬೆನ್ನೂರು, ಫೆ.15- ಬೆಳ್ಳೂಡಿ ಗ್ರಾಮದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ ಶಾಲಾ ಪೋಷಕರಾದ ಗ್ರಾಮದ ರಾಮಪ್ಪ ಮಡಿವಾಳರ್ ಇವರು, ತಮ್ಮ ಮಗ ವಿಕಾಸ್ ಹುಟ್ಟುಹಬ್ಬದ ಪ್ರಯುಕ್ತ 18 ಸಾವಿರ ರೂ. ಬೆಲೆಯ ಜೆರಾಕ್ಸ್ ಪ್ರಿಂಟರ್ ಅನ್ನು ದಾನವಾಗಿ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಬಿ.ವಿ.ತಿಪ್ಪೇಶ್, ಸಹ ಶಿಕ್ಷಕರಾದ ಮಂಜುನಾಥ್ ಕಡೇಮನಿ, ಜಿ.ಬಿ.ರವೀಂದ್ರನಾಥ್, ಶಶಿಕಲಾ ಪೂಜಾರ್, ಕಾವ್ಯ ಮತ್ತು ಪೂಜಾ ಇದ್ದರು.

## ಇಂದಿನಿಂದ ವಾಹನ ಸಂಚಾರ ಗಣತಿ

ದಾವಣಗೆರೆ, ಫೆ.16- ಲೋಕೋಪಯೋಗಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ರಸ್ತೆ ಸಂಚಾರ ಸಮೀಕ್ಷೆಯನ್ನು ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಆಯ್ದ 139 ಸ್ಥಳಗಳಲ್ಲಿ ನಾಳೆ ದಿನಾಂಕ 17 ರ ಸೋಮವಾರ ಬೆಳಿಗ್ಗೆ 6 ರಿಂದ ಇದೇ ದಿನಾಂಕ 24 ರ ಬೆಳಿಗ್ಗೆ 6 ಗಂಟೆಯವರೆಗೆ ಸತತವಾಗಿ 7 ದಿನಗಳ ಕಾಲ ಸಿ.ಸಿ ಕ್ಯಾಮರ ಮುಖಾಂತರ ವಾಹನ ಸಂಚಾರ ಗಣತಿಯನ್ನು ನಡೆಸಲಾಗುವುದು.

ಈ ಗಣತಿ ಕಾರ್ಯದಿಂದ ರಸ್ತೆಯಲ್ಲಿನ ವಾಹನ ದಟ್ಟಣೆ ಅರಿಯಲು ಹಾಗೂ ಇರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು, ಅಗಲೀಕರಣ, ವಾಹನಗಳ ಸಂಚಾರ ಸುಗಮಗೊಳಿಸಲು, ಸಂಚಾರದಲ್ಲಿ ಸುರಕ್ಷತೆ ಉತ್ತಮಪಡಿಸಲು, ಅಪಘಾತ ತಡೆಯಲು ಗಣತಿಯಿಂದ ಸಹಕಾರಿಯಾಗಲಿದೆ. ವಾಹನ ಸವಾರರು ಗಣತಿಗೆ ಸಹಕರಿಸಲು ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

# ಭಜನೆ ಸ್ಪರ್ಧೆಯಲ್ಲಿ ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡ ಪ್ರಥಮ



ಜಗಳೂರು, ಫೆ. 16- ಭರಮಸಾಗರದಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ನಡೆದ ಭಜನೆ ಸ್ಪರ್ಧೆಯಲ್ಲಿ ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡ ಪ್ರಥಮ ಪ್ರಶಸ್ತಿ ಪಡೆಯುವ ಮೂಲಕ ಜಗಳೂರು ತಾಲ್ಲೂಕಿಗೆ ಕೀರ್ತಿ ತಂದಿದೆ. ಸಿರಿಗೆರೆ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯಿಂದ ಪ್ರಶಸ್ತಿ ಪಡೆದಿದ್ದಾರೆ.

ರಾಜ್ಯದ ಹಲವು ಕಡೆ ನಡೆದ ಭಜನಾ ಸ್ಪರ್ಧೆಗಳಲ್ಲಿ 34 ವರ್ಷಗಳ ಕಾಲ ಸತತವಾಗಿ ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡ ಸ್ಪರ್ಧೆಯಲ್ಲಿ ಭಾಗವಹಿಸಿತ್ತು. ಪ್ರತಿ ವರ್ಷ ಸಿರಿಗೆರೆಯಲ್ಲಿ ರಾಜ್ಯಮಟ್ಟದ ಭಜನಾ ಸ್ಪರ್ಧೆಗಳು ನಡೆಯುತ್ತವೆ. ಸಿರಿಗೆರೆಯಲ್ಲಿ 6 ಬಾರಿ ಭಜನಾ ಪ್ರಶಸ್ತಿ ಬಹುಮಾನವನ್ನು ಪಡೆದಿದ್ದು, ಈ ಬಾರಿ 2025 ರಲ್ಲಿ ಜಗಳೂರಿನಲ್ಲಿ ನಡೆದ ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆಯಲಾಗಿದೆ ಎಂದು ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡದ ಮುಖ್ಯಸ್ಥ ಪಿ.ಎಲ್.ಡಿ.ಬ್ಯಾಂಕ್‌ನ ಮಾಜಿ ಅಧ್ಯಕ್ಷ ಪಿ.ಜಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

2019-20 ನೇ ಸಾಲಿನಲ್ಲಿ ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡದ ಮುಖ್ಯಸ್ಥ ಪಿ.ಜಿ. ಪರಮೇಶ್ವರಪ್ಪ ಅವರಿಗೆ ಜಾನಪದ ಅಕಾಡೆಮಿ ರಾಜ್ಯ ಪ್ರಶಸ್ತಿ ಸಿಕ್ಕಿದ್ದನ್ನು ಸ್ಮರಿಸಬಹುದು.

ಬಿಳಿಚೋಡಿನ ಶ್ರೀ ಬಸವೇಶ್ವರ ಭಜನಾ ತಂಡದ ಮುಖ್ಯಸ್ಥರಾದ ಪಿ.ಜಿ.ಪರಮೇಶ್ವರಪ್ಪ, ದ್ಯಾಮೇಶ್ ಪೂಜಾರ್, ಶಂಕ್ರಪ್ಪ, ಪಿ.ಎಸ್.ಪ್ರಕಾಶ್, ಪಿ.ಎ.ಚಂದ್ರಪ್ಪ, ಜೆ.ಕರಿಬಸಪ್ಪ, ಪಿ.ನಾಗೇಂದ್ರಪ್ಪ ಶಿಕ್ಷಕರು, ಹಿಮಗಿರಿಯಪ್ಪ, ಕೆ.ನಾಗಪ್ಪ, ಜಿ.ರೇವಣ್ಣ, ಪಿ.ಎಂ.ಕರಿಬಸಪ್ಪ, ಪಿ.ಎಸ್. ಸಿದ್ದೇಶ್, ಬಿ.ವಿ.ನಾಗರಾಜು, ಕೆಂಚಪ್ಪ, ಜಿ.ಚೆನ್ನಬಸಪ್ಪ, ಕೆ.ಎಂ. ರವಿ ಸೇರಿದಂತೆ ಇತರರು ಇದ್ದರು.

## ಜಗಳೂರು : ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಜಗಳೂರು, ಫೆ. 16- ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಗ್ರಾಮಾ ಡಳಿತ ಅಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕಪ್ಪುಬಟ್ಟೆ ಧರಿಸಿ ಪ್ರತಿಭಟನೆ ನಡೆಸಿದರು.

ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ತಾಲೂಕು ಅಧ್ಯಕ್ಷ ಎಚ್. ಅರುಣ್ ಕುಮಾರ್ ಮಾತನಾಡಿ, 2024 ಸೆ.26 ರಿಂದ ಅಕ್ಟೋಬರ್ 3 ರವರೆಗೆ ನಡೆದ ರಾಜ್ಯವ್ಯಾಪಿ ಮುಷ್ಕರದಂದು ನಡೆಸಲಾಗಿದ್ದ ಪ್ರತಿಭಟನೆಯಲ್ಲಿ ಸರ್ಕಾರದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರ ಭರವಸೆಯಂತೆ ಪ್ರತಿಭಟನೆ ಹಿಂಪಡೆಯಲಾಗಿತ್ತು. ಈ ವೃಂದದ ನೌಕರರ ಬೇಡಿಕೆ ಈವರೆಗೂ ಈಡೇರಿಸಿಲ್ಲ. ಅಲ್ಲದೆ ಪ್ರತಿಭಟನೆ ಪೂರ್ವಕ್ಕಿಂತಲೂ ಅಧಿಕ ಕಾರ್ಯಭಾರದ ಒತ್ತಡ ಉಂಟಾಗಿದೆ. ಕೂಡಲೇ ತಾಂತ್ರಿಕ ಸಮಸ್ಯೆ ಬಗೆಹರಿಸಬೇಕು. ನೌಕರರ ಕೌಟುಂಬಿಕ ಸಮಸ್ಯೆ, ಕಛೇರಿಗಳಿಗೆ ಮೂಲ ಸೌಕರ್ಯ ಒದಗಿಸಬೇಕು. ಅನುಕಂಪದ ನೇಮಕಾತಿ ವೃಂದ ಮತ್ತು ನೇಮಕಾತಿ ತಿದ್ದುಪಡಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ವಿನಾಯಕ, ಪದಾಧಿಕಾರಿಗಳಾದ ಮಹೇಶ್, ಶಿವರಾಜ್, ಮಲ್ಲಿಕಾರ್ಜುನ್, ದಿಲೀಪ್, ಕೋಟೆಪ್ಪ, ಕೊಟ್ರೇಶ್ ಸೇರಿದಂತೆ ಇತರರು ನೇತೃತ್ವ ವಹಿಸಿದ್ದರು.



## ಹರಿಹರ ತಹಶೀಲ್ದಾರ್ ಕಚೇರಿಯಲ್ಲಿ ಸಂತ ಸೇವಾಲಾಲ್ ಜಯಂತಿ ಆಚರಣೆ



ಹರಿಹರ, ಫೆ.16- ರಾಷ್ಟ್ರೀಯ ಮತ್ತು ನಾಡ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿಯನ್ನು ಆಚರಿಸಲಾಯಿತು.

ತಹಶೀಲ್ದಾರ್ ಗುರುಬಸವರಾಜ್ ಅವರು ಸಂತ ಸೇವಾಲಾಲ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಗ್ರೇಡ್ 2 ತಹಶೀಲ್ದಾರ್ ಪುಷ್ಪಾ, ಡಾ. ವಿಶ್ವನಾಥ್ ಕುಂದಗೋಳಮಠ, ಶಿಕ್ಷಣ ಇಲಾಖೆಯ ಬಸವರಾಜಯ್ಯ, ಆರೋಗ್ಯ ಇಲಾಖೆ ಎಂ. ಉಮ್ಮಣ್ಣ, ಎಎಸ್ಐ ಮನಸೂರು ಅಹ್ಮದ್, ಸಂತ ಸೇವಾಲಾಲ್ ಸಮಾಜದ ಮುಖಂಡ ಶಶಿನಾಯ್ಕ್, ತಾಲ್ಲೂಕು ಮಟ್ಟದ ಅಧಿಕಾರಿಗಳು, ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬಿ.ಕಾಂ : ಮಹಾಲಕ್ಷ್ಮಿಗೆ 5ನೇ ರ್‍ಯಾಂಕ್



ಚಿತ್ರದುರ್ಗ, ಫೆ. 16- ನಗರದ ಚಂದ್ರವಳ್ಳಿಯ ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿನಿ ಟಿ. ಮಹಾಲಕ್ಷ್ಮಿ ದಾವಣಗೆರೆ ವಿವಿ ನಡೆಸಿದ 2023-24ನೇ ಸಾಲಿನ ಬಿ.ಕಾಂ. ಅಂತಿಮ ಪದವಿ ಪರೀಕ್ಷೆಯಲ್ಲಿ 5ನೇ ರ್‍ಯಾಂಕ್ ಗಳಿಸಿರುತ್ತಾರೆ ಎಂದು ಪ್ರಾಂಶುಪಾಲ ಡಾ. ಎಸ್.ಹೆಚ್. ಪಂಚಾಕ್ಷರಿ ತಿಳಿಸಿದ್ದಾರೆ.

# ಸನಾತನ ಧರ್ಮದ ಗೊಂದಲ ಸೃಷ್ಟಿಸುವ ಬದಲು ವ್ಯಾಖ್ಯಾನಿಸುವ ಗುರುತರ ಜವಾಬ್ದಾರಿ ಹೊರಬೇಕು

**'ಸಂವಿಧಾನ v/s ಸನಾತನವಾದ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಡಿ.ರಾಮನಮಲಿ**

ಹರಪನಹಳ್ಳಿ, ಫೆ.16- ಸನಾತನ ಧರ್ಮದ ವಿಷಯವಾಗಿ ಗೊಂದಲ ಸೃಷ್ಟಿಸುವ ಬದಲು, ಅದರ ಬಗ್ಗೆ ಜನಸಾಮಾನ್ಯರಿಗೆ ವ್ಯಾಖ್ಯಾನಿಸುವ ಗುರುತರ ಜವಾಬ್ದಾರಿ ಸನಾತನದ ಪರ ನಿಂತವರ ಮೇಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಿ.ರಾಮನಮಲಿ ಹೇಳಿದರು.

ಪಟ್ಟಣದ ಸಾಮರ್ಥ್ಯ ಸೌಧದಲ್ಲಿ ಜನದನಿ ಸಾಹಿತ್ಯ ವೇದಿಕೆ ವತಿಯಿಂದ, ಶಿವಸುಂದರ್ ರಚಿಸಿರುವ 'ಸಂವಿಧಾನ v/s ಸನಾತನವಾದ' ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಎಲ್ಲ ಜನರನ್ನೂ ಸಮಾನರು ಎಂದು ಮೊದಲು ಪರಿಗಣಿಸಿದ್ದು, ಈ ದೇಶದ ಸಂವಿಧಾನ. ದೇಶದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಬೇಕೇ. ವಿನಃ ದೇಶದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾಲ್ಕು ನೂರಕ್ಕೂ ಹೆಚ್ಚು ಸೀಟುಗಳು ಬಂದರೆ, ನಮ್ಮ ಆಡಳಿತವೇ ಬೇರೆ ಎನ್ನುವುದು ಸರಿಯಲ್ಲ ಎಂದರು.

ಪುಸ್ತಕ ಕುರಿತು ಕೊಪ್ಪದ ಸುಧೀರ್‌ಕುಮಾರ್ ಮರೋಳಿ ಮಾತನಾಡಿ, ಇಂದಿನ ಯುವಕರಿಗೆ ಸಂವಿಧಾನ ತಮ್ಮನ್ನು



ಬಿಗ್ ಬಾಸ್ ಮಾಡುತ್ತದೆ ಎನ್ನುವ ನಂಬಿಕೆ ಇಲ್ಲ. ಇದು ಯಾರೊಬ್ಬರನ್ನೂ ಸಮರ್ಥನೆ ಮಾಡುವ ಪುಸ್ತಕ ಅಲ್ಲ. ಪುಸ್ತಕದಲ್ಲಿ ಮೌಲ್ಯಯುತ ಬರಹಗಳಿವೆ. ಸಂವಿಧಾನ ರಚನೆ ಮಾಡುವಾಗ ಅಂಬೇಡ್ಕರ್ ಅನುಭವಿಸಿದ ಕಷ್ಟ ನಷ್ಟಗಳ ಬಗ್ಗೆ ಇದೆ. ಏಕಲವ್ಯನ ಹೆಸರಿನಲ್ಲಿ ಕ್ರೀಡಾಪಟುಗಳಿಗೆ ಪ್ರಶಸ್ತಿ ಕೊಡುವುದು ಕೂಡಾ ಭಾರತ ಸಂವಿಧಾನದ ಶಕ್ತಿ. ಚಿಕ್ಕ ಪುಸ್ತಕದಲ್ಲಿ ಸಂವಿಧಾನದ ಬಗ್ಗೆ ವಿವರವಾಗಿ ಹೇಳಿದೆ. ಈ ದೇಶದಲ್ಲಿ ಬುಲ್ಡೋಜರ್ ನ್ಯಾಯದ ವ್ಯವಸ್ಥೆಯಲ್ಲಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳಿಗೆ ಉತ್ತಮ ಜ್ಞಾನ ನೀಡುವಲ್ಲಿ ಸರ್ಕಾರ ಎಡವುತ್ತಿದೆ. ಎಲ್ಲ ಪಕ್ಷಗಳಲ್ಲಿ ಒಳ್ಳೆಯವರು ಇದ್ದಾರೆ. ದೇಶದಲ್ಲಿ ಏಕರೂಪವಾಗಿರುವ ಶಿಕ್ಷಣ ಜಾರಿಯಾಗಬೇಕು.ರಾಜಕಾರಣಿಗಳು 'ಸಂವಿಧಾನ v/s ಸನಾತನವಾದ' ಪುಸ್ತಕ ಓದಿ ಎಂದು ಹೇಳಿದರೆ ನೀವು ಉತ್ತಮ ರಾಜಕಾರಣಿಯಾಗುತ್ತೀರಿ. ಸಂವಿಧಾನ ನಮ್ಮನ್ನು ಕೂಡಿ ಬಾಳಿಸುತ್ತಿದೆ ಎಂದರು. ಕುಂಭಮೇಳದಲ್ಲಿ ಯಾರ್ಯಾರು ಮಿಂದು ಎದ್ದರೂ ಎನ್ನುವ ಬದಲು ಸಂವಿಧಾನ ಓದುವ ಕೆಲಸ ಮಾಡಿ ಎಂದರು.

ಪುಸ್ತಕ ಬರೆದ ಬೆಂಗಳೂರಿನ ಸಾಹಿತಿ ಶಿವಸುಂದರ್ ಮಾತನಾಡಿ, ರಾಜಕಾರಣಕ್ಕೆ ತಾಯಿ ಕರುಣೆ ಬೇಕು. ಸಂಘ ಪರಿವಾರ ಸಂವಿಧಾನವನ್ನು ತಬ್ಬಿಕೊಳ್ಳುವುದು ಧೃತರಾಷ್ಟ್ರನ ತಬ್ಬಿಕೊಳ್ಳುವಿಕೆ ಎಂದು ಅರ್ಥವಾಗುತ್ತದೆ. ಇಂದು ಮತ್ತೊಂದು ಸ್ವಾತಂತ್ರ್ಯ ಪಡೆದುಕೊಳ್ಳುವ ಅಗತ್ಯತೆ ಇದೆ ಎಂದರು. ಬಲಿಷ್ಟರು ದುರ್ಬಲರನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ. ಮನುಷ್ಯರನ್ನು ಸಮಾನವಾಗಿ ಕಾಣದ ಸನಾತನ ಮನಸುಗಳಿಗೆ ಇಂತಹ ಸಂಗತಿಗಳು ಸದಾ ಅಲರ್ಜಿ ಎನ್ನುವುದು ವಾಸ್ತವ. ಈ ಕಾರಣಕ್ಕಾಗಿ ಸಂವಿಧಾನ ಎಂದರೆ ಅವರಿಗಾಗದು. ಅಂಬೇಡ್ಕರ್ ಎಂದರೂ ಅವರಿಗಾಗದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಮಾತನಾಡಿ, ಪ್ರಮುಖವಾಗಿ ಇಂದಿನ ಯುವಕರಿಗೆ ಸಂವಿಧಾನದ ಬಗ್ಗೆ ತಿಳಿಹೇಳುವ ಅಗತ್ಯತೆ ಇದೆ. ಸುಧೀರ್‌ಕುಮಾರ್ ಸಂವಿಧಾನದ ಬಗ್ಗೆ ಉತ್ತಮವಾಗಿ ಹೇಳಿದ್ದಾರೆ. ರಾಜಕಾರಣಿಗಳಾದರೂ ನಾವು ಸಮಾಜಕ್ಕೆ ಉತ್ತಮ ಸಂದೇಶ ಕೊಡುವ ಅನಿವಾರ್ಯತೆ ಇದೆ. ಯುವಕರಲ್ಲಿ ಸಂವಿಧಾನ ಮತ್ತು ನಾಯಕತ್ವ ರೂಪಿಸುವ ಶಿಬಿರಗಳು ನಡೆಯಬೇಕು ಎಂದರು.

ಮುಖಂಡ ಬಸವರಾಜ ಸಂಗಪ್ಪನವರ್ ಮಾತನಾಡಿ, ದೇಶವನ್ನು ಅರ್ಥಮಾಡಿಕೊಂಡವರಿಗೆ ಸಂವಿಧಾನ ಅರ್ಥವಾಗುತ್ತದೆ. ಜನರಿಗೆ ವಾಸ್ತವ ಸತ್ಯ ತಿಳಿಸುವ ಕೆಲಸವನ್ನು ಮಾಡಿಕೊಂಡು ಬಂದಿರುವ ಲಡಾಯಿ ಪ್ರಕಾಶನ, ಈ ಕಿರುಹೊತ್ತಿಗೆಯನ್ನು ಹೊರತಂದಿದ್ದು ಇದನ್ನು ಓದಿ ಎಂದರು.

ಗದುಗಿನ ಬಸವರಾಜ ಸೂಳಿಬಾವಿ, ಹೊಸಪೇಟೆ ಸೋಮಶೇಖರ ಬಣ್ಣದಮನೆ, ಸಾಹಿತಿ ಇಸ್ಮಾಯಿಲ್ ಎಲಿಗಾರ್, ಶಿಕ್ಷಕರಾದ ಸಿ.ಗಂಗಾಧರ, ಶೇಖರ್ ನಾಯ್ಕ, ಮಾಲತೇಶ ಮರೇಗೌಡ, ಗುಡಿಹಳ್ಳಿ ಹಾಲೇಶ, ವಿವಿಧ ಸಂಘಟನೆಗಳ ಬಸಮ್ಮ, ಪುದ್ಮ, ನಿರ್ಮಲ, ಪದ್ಮಲತ, ಮೀನಾಕ್ಷಿ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸ್ಕೌಟ್ಸ್, ಗೈಡ್ಸ್‌ನಿಂದ ಕರಾಳ ದಿನಾಚರಣೆ



ದಾವಣಗೆರೆ, ಫೆ.16- ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಗರದ ಅಮರ್ ಜವಾನ್ ಪಾರ್ಕ್‌ನಲ್ಲಿ ಪುಲ್ವಾಮಾ ಕರಾಳ ದಿನ ಆಚರಿಸಲಾಯಿತು.

ಸ್ಕೌಟ್ ಮತ್ತು ಗೈಡ್ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ವೀರ ಯೋಧರಿಗೆ ಪುಷ್ಪ ನಮನ ಸಲ್ಲಿಸಿ ಜೈಕಾರ ಕೂಗಿದರು.

ಈ ವೇಳೆ ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ ಷಡಾಕ್ಷರಪ್ಪ ಮಾತನಾಡಿ, ದೇಶದ ಯೋಧರನ್ನು, ಉಗ್ರಗಾಮಿಗಳು ಮೋಸದಿಂದ ಇಡೀ ಬಸ್ಸನ್ನು ಸ್ಫೋಟಿಸಿ ಹತ್ಯೆ ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ಸುಬೇದಾರ್ ಮಲ್ಲನಗೌಡ ಪಾಟೀಲ್ ಮಾತನಾಡಿ, ರೈತರು ಮತ್ತು ಸೈನಿಕರು ದೇಶದ ಆಸ್ತಿಯಾಗಿದ್ದಾರೆ.

ಗಾಳಿ-ಮಳೆ, ಚಳಿ-ಬಿಸಿಲನ್ನು ಲೆಕ್ಕಿಸದ ಸೈನಿಕರು, ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡುತ್ತಾರೆ. ಇವರ ಅಮರ ತ್ಯಾಗದಿಂದಲೇ ದೇಶದಲ್ಲಿನ ನಾವು ನೆಮ್ಮದಿಯ ಉಸಿರು ಹಾಕುತ್ತಿದ್ದೇವೆ ಎಂದು ಯೋಧರನ್ನು ಸ್ಮರಿಸಿದರು.

ಜಿಲ್ಲಾ ಸಹಾಯಕ ಆಯುಕ್ತ ಎನ್.ಕೆ. ಕೊಟ್ರೇಶ್, ಕಾರ್ಯದರ್ಶಿ ಎಂ.ರತ್ನ, ಎ.ಎಲ್. ಟಿ. ಕ್ಲಬ್ ಕುಮಾರಸ್ವಾಮಿ, ಹೆಚ್.ಡಬ್ಲ್ಯೂ.ಬಿ. ಸ್ಕೌಟ್ ಶ್ರೀನಿವಾಸ್, ಯುವ ಸಮಿತಿ ಸದಸ್ಯರಾದ ವಿಜಯ್, ದರ್ಶನ್, ತ್ಯಾಗರಾಜ್, ನಿತಿನ್, ವಿಜೇತ, ಅಕ್ಷತಾ, ಎಸ್.ಜಿ.ವಿ. ಅಶ್ವಿನಿ ಈ ಸಂದರ್ಭದಲ್ಲಿ ಹಾಜರಿದ್ದರು.

## ಪೊಲೀಸ್ ಪಬ್ಲಿಕ್ ಶಾಲೆ ಪ್ರವೇಶ ಪ್ರಕ್ರಿಯೆ ಆರಂಭ

ದಾವಣಗೆರೆ, ಫೆ.16- ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ ಅಂಡ್ ಎಜುಕೇಶನ್ ಟ್ರಸ್ಟ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಪಬ್ಲಿಕ್ ಶಾಲೆಯ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ.

ಶಾಲೆಯು ಸಿಬಿಎಸ್‌ಇ (ಕೇಂದ್ರೀಯ) ಪಠ್ಯಕ್ರಮಕ್ಕೆ ಹೊಂದಿಕೊಂಡಂತೆ ಸಿಬಿಎಸ್‌ಸಿ ಮಾನ್ಯತೆಯನ್ನು ಪಡೆದಿದೆ.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮದೊಂದಿಗೆ ಚಟುವಟಿಕೆಯಾಧಾರಿತ ಶಿಕ್ಷಣವನ್ನು ನೀಡುತ್ತಿದೆ.

ಮುಂದಿನ ಸಾಲಿನ ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದ್ದು, ಆಸಕ್ತಿಯುಳ್ಳ ಪೋಷಕರು ಶಾಲೆಯ ವೆಬ್‌ಸೈಟ್‌ನಲ್ಲಿ ತಮ್ಮ ಮಕ್ಕಳ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಶಾಲೆಯ ಪ್ರವೇಶಕ್ಕೆ ಪರೀಕ್ಷೆಯನ್ನು ಇದೇ ದಿನಾಂಕ 22 ಮತ್ತು 23 ರಂದು ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ppsdavanagere.karnataka.gov.in ವೆಬ್‌ಸೈಟ್ ಹಾಗೂ ದೂ.ಸಂ: 9164633833, 8277981961 ಸಂಪರ್ಕಿಸಲು ಶಾಲೆಯ ಕಾರ್ಯದರ್ಶಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

# ಮಕ್ಕಳ ಸಾಮರ್ಥ್ಯಕ್ಕೂ ಮೀರಿದ ನಿರೀಕ್ಷೆ ಬೇಡ

### ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಪೋಷಕರಿಗೆ ಡಾ. ಕೆ.ಎ.ಛಾಯಾ ಕಿವಿಮಾತು

ದಾವಣಗೆರೆ, ಫೆ.16- ಪೋಷಕರು ತಮ್ಮ ಮಕ್ಕಳ ಮೇಲೆ ಸಾಮರ್ಥ್ಯಕ್ಕೂ ಮೀರಿದ ನಿರೀಕ್ಷೆ ಇಟ್ಟುಕೊಂಡು, ಪರೀಕ್ಷಾ ಸಮಯದಲ್ಲಿ ಒತ್ತಡ ಹೇರುವುದು ಸರಿಯಲ್ಲ ಎಂದು ಜಜಮು ವೈದ್ಯಕೀಯ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ. ಕೆ.ಎ. ಛಾಯಾ ಅವರು ಪೋಷಕರಿಗೆ ಕಿವಿಮಾತು ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಡಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 'ಪರೀಕ್ಷಾ ಸಮಯದಲ್ಲಿ-ಮಕ್ಕಳ ಆರೋಗ್ಯ, ಪೋಷಕರಿಗೆ ಸುಲಭ ಸೂತ್ರಗಳು' ಎಂಬ ವಿಷಯವಾಗಿ ಅವರು ಮಾತನಾಡಿದರು.

ನಾವು ಅಡುಗೆ ಮನೆಯಲ್ಲಿ ಒಂದು ತಿನಿಸು ಮಾಡಬೇಕಾದರೆ, ಅದರ ಸಿದ್ಧತೆ ಎಷ್ಟು ಮುಖ್ಯವೋ ಹಾಗೆಯೇ ಮಕ್ಕಳು ತಮ್ಮ ವಾರ್ಷಿಕ ಪರೀಕ್ಷೆಗಳಿಗೆ ಪೂರ್ವಭಾವಿ ತಯಾರಿ ನಡೆಸುವುದು ಅಷ್ಟೇ ಮುಖ್ಯವಾಗಿರುತ್ತದೆ, ಆದರೆ ಇದು ಒಂದೆರಡು ತಿಂಗಳು ಕಠಿಣ ಶ್ರಮವಾಗಿರದೇ ಶಾಲಾ - ಕಾಲೇಜುಗಳ ಪ್ರಾರಂಭ ದಿನದಿಂದಲೇ ಶುರುವಾಗಿರಬೇಕು.

'ಯುದ್ಧ ಕಾಲೇ ಶಸ್ತ್ರಾಭ್ಯಾಸ' ಬೇಡ. ಯಾವ ಮಕ್ಕಳು ತರಗತಿಯ ಮೊದಲನೇ ದಿನದಿಂದ




ಅಧ್ಯಯನದಲ್ಲಿ ತೊಡಗಿಸಿಕೊಳ್ಳುವರೋ ಅವರಿಗೆ ಪರೀಕ್ಷೆಯು ಸುಲಭವಾಗುತ್ತದೆ.

ಪೋಷಕರು ಸಹಜವಾಗಿ ಮಾಡುವ ತಪ್ಪುಗಳನ್ನು ಪಟ್ಟಿ ಮಾಡಿದ ಅವರು, ಪರೀಕ್ಷೆ ಅಂದಕೂಡಲೇ, ಮಕ್ಕಳಿಗಿಂತ ಪೋಷಕರೇ ಹೆಚ್ಚು ಆತಂಕಕ್ಕೆ ಒಳಗಾಗುತ್ತಾರೆ.

ನಮ್ಮ ಐದು ಬೆರಳುಗಳು ಹೇಗೆ ಸಮನಾಗಿಲ್ಲವೋ ಹಾಗೆಯೇ ಪ್ರತಿಯೊಂದು ಮಗುವಿನ ಓದುವ, ಗ್ರಹಿಸುವ ಮತ್ತು ಕಾರ್ಯರೂಪದಲ್ಲಿ ತರುವ ಶಕ್ತಿ ಬೇರೆ-ಬೇರೆಯೇ ಇರುತ್ತದೆ. ಹಾಗಾಗಿ ಮಕ್ಕಳಿಗೆ ಪರೀಕ್ಷಾ ಒತ್ತಡವನ್ನು ನಿಭಾಯಿಸುವ ರೀತಿ ತಿಳಿಸಬೇಕು. ಕಲಿಯುವಾಗ ಸಂತೋಷ, ಕ್ರಿಯಾಶೀಲತೆಯಿಂದ ಇರುವುದನ್ನು ಕಲಿಸಬೇಕು.

ಮೂಢನಂಬಿಕೆಗಳ ಬಗ್ಗೆ ತಿಳಿ ಹೇಳಬೇಕು. ಪರೀಕ್ಷೆಯೇ ಜೀವನದ ಕೊನೆಯಲ್ಲ. ಎಷ್ಟೋ ಮಹಾನ್ ಪ್ರತಿಭೆಗಳು ಪರೀಕ್ಷೆಯಲ್ಲಿ ನಪಾಸಾಗಿದ್ದರೂ ಮುಂದಿನ ದಿನಗಳಲ್ಲಿ ಎತ್ತರದ ಸ್ಥಾನದಲ್ಲಿದ್ದಾರೆ ಎಂಬುದನ್ನು ಗಮನಿಸಬೇಕು.

ಧ್ಯಾನ, ವ್ಯಾಯಾಮ, ದೇವರ ಪೂಜೆ, ಸಹಜ ನಡಿಗೆ ನೃತ್ಯ, ಸಂಗೀತ ಮುಂತಾದ ಸಹಜ ಸ್ಥಿತಿಗೆ ಬರಬೇಕು. ಇದರಿಂದ ನಿಮ್ಮ ಮಗುವಿಗೆ ಪ್ರೀತಿ ಮತ್ತು ಸಹಜ ಆರೈಕೆ ದೊರೆಯುತ್ತದೆ.

ಯಾವುದಾದರೂ ವಿಷಯದಲ್ಲಿ ಒತ್ತಡ ಹೇರಿದಾಗ, ಮಗುವಿಗೆ ತನ್ನ ಹಿಂದಿನ ಕಠಿಣ ಪರೀಕ್ಷೆಯಲ್ಲಿ ಉತ್ತಮವಾಗಿ ಪ್ರದರ್ಶಿಸಿದ ಸವಿನೆನಪನ್ನು ಮರುಕಲ್ಪನೆ ಮಾಡಿಸಬೇಕು. ತಾಳ್ಮೆಯ ಸವಿಮಾತು, ನಿಮ್ಮ ಇರುವಿಕೆ, ಪ್ರೋತ್ಸಾಹಿಸುವ ನುಡಿಗಳು ಮತ್ತು ಮುಗುಳ್ನಗೆ ಮಗುವಿಗೆ ಬೇಕಿರುವ ಸಹಾಯವಾಗಿರುತ್ತದೆ ಎಂದು ಪೋಷಕರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆ ನಿರ್ದೇಶಕ ಡಾ. ಜಿ. ಗುರುಪ್ರಸಾದ್, ಮಕ್ಕಳ ತಜ್ಞರಾದ ಡಾ.ಕೌಜಲಗಿ, ಡಾ.ಮೃತ್ಯುಂಜಯ, ಡಾ.ಮಧು ಪೂಜಾರ್, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ ಮತ್ತಿತರರು ಉಪಸ್ಥಿತರಿದ್ದರು.

## ಟಿಎಪಿಸಿಎಂಎಸ್ ವಾಣಿಜ್ಯ ಮಳಿಗೆ ಕಾಮಗಾರಿಗೆ ಶಾಸಕರಿಂದ ಶಂಕುಸ್ಥಾಪನೆ



ಹೊನ್ನಾಳಿ, ಫೆ.16- ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್ ವ್ಯಾಪ್ತಿಯ ಹಳೇ ಆಸ್ಪತ್ರೆ ಪಕ್ಕದಲ್ಲಿ 1 ಕೋಟಿ 34 ಲಕ್ಷ ರೂ.ಗಳ ಕಟ್ಟಡ ಹಾಗೂ ವಾಣಿಜ್ಯ ಮಳಿಗೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಶಾಂತನಗೌಡ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಕಾಯಿ ಬಸಣ್ಣ, ಉಪಾಧ್ಯಕ್ಷ ಹೆಚ್.ಡಿ ಬಸವರಾಜಪ್ಪ, ಸದಸ್ಯರಾದ ಕ್ಯಾಸಿನಕೇರಿ ಶೇಖರಪ್ಪ, ಬಿಂಬಾ ಮಂಜಣ್ಣ, ಪ್ರಕಾಶ, ಚೇತನ, ಹಾಲಪ್ಪ, ಅನಂತ ನಾಯ್ಕ, ಮಹಿಳಾ ಸದಸ್ಯೆ ರತ್ನಮ್ಮ, ಕಾರ್ಯದರ್ಶಿ ಮುರುಗೇಶ, ಸರಳಿಮನೆ ರಾಜು, ಬನಶಂಕರಿ ಹರೀಶ್, ಗೋಪಿ ಇತರರಿದ್ದರು.

## ನಗರದಲ್ಲಿ ನಾಳೆ ಪುರಂದರ ದಾಸರ, ತ್ಯಾಗರಾಜರ ಆರಾಧನಾ ಮಹೋತ್ಸವ

ದಾವಣಗೆರೆ, ಫೆ.16- ಬ್ರಾಹ್ಮಣ ಸಮಾಜ ಸೇವಾ ಸಂಘ ಮಹಿಳಾ ವಿಭಾಗದಿಂದ ಶ್ರೀ ಪುರಂದರದಾಸರ ಹಾಗೂ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವವನ್ನು ವರ್ತುಲ ರಸ್ತೆ, ನಿಜಲಿಂಗಪ್ಪ ಬಡಾವಣೆಯ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 18ರ ಮಂಗಳವಾರ ಸಂಜೆ 5.30ಕ್ಕೆ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಶ್ರೀ ಪುರಂದರದಾಸರ ದೇವರನಾಮ ಹಾಗೂ ಶ್ರೀ ತ್ಯಾಗರಾಜರ ಕೀರ್ತನೆ ಹೇಳಲಾಗುವುದು.

ನಂತರ ಇತ್ತೀಚಿಗೆ ನಡೆದ ಶ್ರೀ ಪುರಂದರದಾಸರ ದೇವರನಾಮ ಮತ್ತು ಶ್ರೀ ತ್ಯಾಗರಾಜರ ಕೀರ್ತನೆಗಳ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಹಾಗೂ ಸಾರ್ವಜನಿಕರು ಭಾಗವಹಿಸಬೇಕಾಗಿ ಅಧ್ಯಕ್ಷರಾದ ಶ್ರೀಮತಿ ನಳಿನಿ ಅಚ್ಯುತ್ ಹಾಗೂ ಕಾರ್ಯದರ್ಶಿ ಶ್ರೀಮತಿ ಚಂದ್ರಶೇಖರ್ ಅಡಿಗ ಪತ್ರಿಕಾ ಹೇಳಿಕೆಯಲ್ಲಿ ಕೋರಿದ್ದಾರೆ.

## ರಾಜ್ಯ ರೋಪ್ ಜಂಪ್ ಸ್ಪರ್ಧೆ : ನಿಟ್ಟುವಳ್ಳಿ ಆದರ್ಶ ಪ್ರೌಢ ಶಾಲೆಗೆ ತೃತೀಯ ಸ್ಥಾನ



ದಾವಣಗೆರೆ, ಫೆ.16- ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ರೋಪ್ ಜಂಪ್ ಸ್ಪರ್ಧೆಯಲ್ಲಿ ನಿಟ್ಟುವಳ್ಳಿಯ ಆದರ್ಶ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಿ ತೃತೀಯ ಸ್ಥಾನ ಗಳಿಸಿದ್ದಾರೆ.

ಕ್ರೀಡಾಪಟುಗಳಾದ ಸಿಂಧು ಲಂಬಾಣಿ, ಕಾಳಿಬಾಯಿ, ಟಿ. ದೀಕ್ಷಿತಾ ಮತ್ತು ಬಿ. ಪ್ರಿಯಾಂಕ ಅವರು ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದರು.

# ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಶಿಕ್ಷಣ ಅತ್ಯಂತ ಸೂಕ್ತ

ದಾವಣಗೆರೆ, ಫೆ. 16- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ದಾವಣಗೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಕೊಡಗನೂರು ದಾವಣಗೆರೆ ದಕ್ಷಿಣ ವಲಯ ಇವರ ಸಹಯೋಗದಲ್ಲಿ ಶಾಲಾ- ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಶಾಲಾ ಆವರಣದಲ್ಲಿ ನಡೆಯಿತು. ಕೆ.ಎಂ. ಗೀತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.




ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ನಡೆದ ಬಂದ ದಾರಿಯನ್ನು ತಿಳಿಸಿದರು.

ಕೊಡಗನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಸ್. ಆರ್. ನಯನಜಮೂರ್ತಿ ಮಾತನಾಡಿ, 'ವಿದ್ಯೆ ಬಾಳಿನ ಬೆಳಕು' ಕುರಿತು ವಿದ್ಯಾರ್ಥಿಗಳಿಗೆ ದತ್ತಿ ಉಪನ್ಯಾಸ ನೀಡುತ್ತಾ, ವಿದ್ಯೆ ಬಾಳಿಗೆ ಅತ್ಯಂತ

**ಉಪನ್ಯಾಸಕ ನಯನಜಮೂರ್ತಿ**

ಅವಶ್ಯಕವಾಗಿ ಬೇಕಾಗಿದೆ. ಪ್ರತಿಯೊಬ್ಬರೂ ವಿದ್ಯೆಯನ್ನು ಕಲಿತರೆ ಸಮಾಜ ಸುಧಾರಣೆ ಆಗುತ್ತದೆ. ಸಮತೋಲನ ಅಭಿವೃದ್ಧಿಗೆ ವಿದ್ಯೆ ಅಡಿಪಾಯವಾಗಿದೆ. ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಶಿಕ್ಷಣ ಅತ್ಯಂತ ಸೂಕ್ತವಾಗಿಸಬೇಕಾಗಿದೆ. ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೇ ಅವರಿಗೆ ಸರಿಯಾದ ವೇಳೆಯಲ್ಲಿ ಸರಿಯಾದ ವಿದ್ಯೆಯನ್ನು ನೀಡಿದರೆ ಸಮಾಜಕ್ಕೆ ಒಳಿತಾಗುತ್ತದೆ ಎಂದರು.

ತಾಲ್ಲೂಕು ಕಸಾಪ ನಿರ್ದೇಶಕರಾದ ಪರಿಮಳ ಜಗದೀಶ್ ದತ್ತಿ ದಾನಿಗಳನ್ನು ಸ್ಮರಿಸಿದರು. ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು, ಜಿಲ್ಲಾ ನೌಕರರ ಸಂಘದ ಮಾಜಿ ಅಧ್ಯಕ್ಷ ಆರ್. ಶಿವಶಂಕರ್ ಕನ್ನಡ ನಾಡು - ನುಡಿ, ಸಂಸ್ಕೃತಿ, ಕಲೆ, ಕನ್ನಡ ಭಾಷೆ ಕುರಿತು ಮಾತನಾಡಿದರು.

# 19ರಂದು ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ

ದಾವಣಗೆರೆ, ಫೆ.16- ಇದೇ ದಿನಾಂಕ 22ರಂದು ನಡೆಯಲಿರುವ ಕೊಟ್ಟೂರು ಶ್ರೀ ಗುರುಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ 46ನೇ ವರ್ಷದ ಸಮಗ್ರ ಪಾದಯಾತ್ರೆ ಹಾಗೂ ಪಾದಯಾತ್ರಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಇದೇ ಇದೇ ದಿನಾಂಕ 19ರಂದು ಸಂಜೆ 5 ಗಂಟೆಗೆ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಟ್ರಸ್ಟ್‌ನ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ, ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ, ವಿರಕ್ತಮಠದ ಡಾ.ಬಸವಪ್ರಭು ಸ್ವಾಮೀಜಿ, ಅಯ್ಯನಹಳ್ಳಿ ರಂಭಾಪುರಿ ಶಾಖಾಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಹಿರೇಮಠದ ಶ್ರೀ ಶಿವಪ್ರಕಾಶ ಸ್ವಾಮೀಜಿ ಹಾಗೂ ಕೋಣಂದೂರು ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಜ್ಯೋತಿ ಬೆಳಗಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ.ಜಿ.ಎಂ. ಗಂಗಾಧರಸ್ವಾಮಿ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಮೇಯರ್ ಕೆ.ಚಮನ್ ಸಾಬ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ದಿನಾಂಕ 20ರಂದು ಗುರುವಾರ ಸಂಜೆ 5 ಗಂಟೆಗೆ 27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ ಸಮಾರಂಭವು ಅರಸೀಕೆರೆ ಶ್ರೀ ಗುರು ಕೋಲಶಾಂತೇಶ್ವರ ವಿರಕ್ತಮಠದಲ್ಲಿ ನಡೆಯಲಿದ್ದು, ಶ್ರೀ ಶಾಂತಲಿಂಗ ದೇಶೀಕೇಂದ್ರ ಸ್ವಾಮೀಜಿ ಹಾಗೂ ನಂದಿಪುರದ ಡಾ. ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಟಿ.ಜೆ. ಬಕ್ಕೇಶಪ್ಪ, ಖಜಾಂಚಿ ಮಲ್ಲಾಬಾದಿ ಗುರುಬಸವರಾಜ್, ಕರಿಬಸಪ್ಪ, ವೀರೇಶ್, ಬೂಸನೂರು ಸುಜಾತಮ್ಮ, ಟಿಂಕರ್ ಮಂಜಣ್ಣ, ಕಂಬಿನೂಲು ರುದ್ರಬಸವರಾಜ್ ಇತರರಿದ್ದರು.

## ಚಿತ್ರದುರ್ಗ : ನಾಳೆ ಹರ್ಡೇಕರ್ ಮಂಜಪ್ಪನವರ ಜಯಂತಿ

ಚಿತ್ರದುರ್ಗ, ಫೆ.16- ನಗರದ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದ ವತಿಯಿಂದ ನಾಡಿದ್ದು ದಿನಾಂಕ 18ರ ಮಂಗಳವಾರ ಬೆಳಿಗ್ಗೆ 8.30 ಗಂಟೆಗೆ ಕರ್ನಾಟಕದ ಗಾಂಧಿ ಎಂದೇ ಖ್ಯಾತರಾಗಿದ್ದ ಹಾಗೂ ಪ್ರಪ್ರಥಮವಾಗಿ ಬಸವ ಜಯಂತಿಯನ್ನು ಆರಂಭಿಸಿದ ಕೀರ್ತಿಗೆ ಪಾತ್ರರಾದ ಹರ್ಡೇಕರ್ ಮಂಜಪ್ಪನವರ ಜಯಂತಿಯನ್ನು ಶ್ರೀಮಠದ ಮುರುಗಿಯ ಶಾಂತವೀರ ಮುರುಘ ರಾಜೇಂದ್ರ ಮಹಾಸ್ವಾಮಿಗಳವರ ಲೀಲಾ ವಿಶ್ರಾಂತಿ ತಾಣದ ಆವರಣದಲ್ಲಿ ಏರ್ಪಡಿಸಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ವಿದ್ಯಾಪೀಠದ ಆಡಳಿತ ಮಂಡಳಿಯ ಅಧ್ಯಕ್ಷ ಶಿವಯೋಗಿ. ಸಿ. ಕಳಸದ್ ವಹಿಸಲಿದ್ದು, ಆಡಳಿತ ಮಂಡಳಿಯ ಸದಸ್ಯರಾದ ಡಾ. ಬಸವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಎಸ್.ಜೆ.ಎಂ. ಫಾರ್ಮಸಿ ಕಾಲೇಜಿನ ನಿರ್ವಹಣೆಯಲ್ಲಿ ಸಮಾರಂಭ ಜರುಗಲಿದೆ.

## ನಗರದಲ್ಲಿ ಇಂದಿನಿಂದ ಯೋಗ ಶಿಬಿರ

ದಿವ್ಯ ಯೋಗ ಮಂದಿರದ ವತಿಯಿಂದ ಶಿವರಾತ್ರಿ ಪ್ರಯುಕ್ತ ಶಿವಶಕ್ತಿ ಸಾಧನಾ ಯೋಗ ಶಿಬಿರವು ಉಚಿತವಾಗಿ ನಡೆಯಲಿದೆ ಎಂದು ಯೋಗ ಮಂದಿರದ ಸಂಸ್ಥಾಪಕ ಅಶೋಕ್ ಗುರೂಜಿ ತಿಳಿಸಿದ್ದಾರೆ.

ಇಂದಿನಿಂದ ಇದೇ ದಿನಾಂಕ ಫೆ. 25ರವರೆಗೆ ಪ್ರಾಣಾಯಾಮ, ಚಕ್ರಧ್ಯಾನ, ಮುದ್ರೆ, ತ್ರಾಟಕಧ್ಯಾನ, ಶಿವಶಕ್ತಿ ಕುಂಡಲಿನಿ ಧ್ಯಾನ ಕಾಸ್ಮಿಕ ಹೀಲಿಂಗ್ ವಿಧಾನಗಳನ್ನು ಹೇಳಿಕೊಡಲಾಗುವುದು.

ಆಸಕ್ತರು ಸಂಜೆ 6.30 ರಿಂದ 8ರವರೆಗೆ ನಗರದ ದಿವ್ಯ ಯೋಗ ಮಂದಿರದಲ್ಲಿ ನಡೆಯಲಿರುವ ಯೋಗ ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ 9972600713.

## ಇಂದು ನಗರ ಪಾಲಿಕೆ ಸಾಮಾನ್ಯ ಸಭೆ

ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರ ಕೆ. ಚಮನ್‌ಸಾಬ್ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪಾಲಿಕೆಯ ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿದೆ ಎಂದು ನಗರ ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಚೌಡೇಶ್ವರಿ, ಭೂತಪ್ಪ ಸ್ವಾಮಿ ದೇವಸ್ಥಾನದ ಕಳಸಾರೋಹಣ



ದಾವಣಗೆರೆ, ಫೆ.16- ಭೋಳಚಟ್ಟಿ ಚೌಡೇಶ್ವರಿ ದೇವಿ ಹಾಗೂ ಕಾಲಭೈರವ ಭೂತಪ್ಪ ಸ್ವಾಮಿ ದೇವಸ್ಥಾನ ಸೇವಾ ಸಮಿತಿಯಿಂದ ನಾಡಿದ್ದು ದಿನಾಂಕ 18ರ ಬೆಳಗ್ಗೆ 7.30ಕ್ಕೆ ನಗರದ ವೀರಶೈವ ರುದ್ರಭೂಮಿ ಮುಂಭಾಗದ ಚೌಡೇಶ್ವರಿ ದೇವಿ ಮತ್ತು ಕಾಲಭೈರವ ಭೂತಪ್ಪ ಸ್ವಾಮಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮ ನಡೆಯಲಿದೆ.

ಐರಣಿ ಹೊಳೆಮಠದ ಬಸವರಾಜ ದೇಶಿಕೇಂದ್ರ ಸ್ವಾಮೀಜಿ, ಆವರಗೊಳ್ಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು, ನಿಚ್ಚವ್ವನಹಳ್ಳಿ ಬೃಹನ್ಮಠದ ಶಿವಯೋಗಿ ಹಾಲಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

## ಹರಿಹರ : ಗ್ರಾಮದೇವತೆ ಊರಮ್ಮ ದೇವಿ ಶಿಲಾಮೂರ್ತಿಗೆ ಗಂಗಾ ಸ್ನಾನ



ಹರಿಹರ, ಫೆ.16- ನಗರದ ಇಂದ್ರಾನಗರ ಬಡಾವಣೆಯ ಪಾರ್ಕ್ ಆವರಣದಲ್ಲಿರುವ ಶ್ರೀ ಗ್ರಾಮದೇವತೆ ಊರಮ್ಮ ದೇವಿ ದೇವಸ್ಥಾನದಲ್ಲಿ, ನೂತನವಾಗಿ 1.5 ಲಕ್ಷ ರೂಪಾಯಿ ವೆಚ್ಚದಲ್ಲಿ ಊರಮ್ಮ ದೇವಿಯ ಶಿಲಾ ಮೂರ್ತಿಯನ್ನು, ನಾಡಿದ್ದು ದಿನಾಂಕ 18 ರಂದು ಪ್ರಾಣಪ್ರತಿಷ್ಠಾಪನೆ ಅಂಗವಾಗಿ, ಇಂದು ನಗರದ ತುಂಗಭದ್ರಾ ನದಿಯಲ್ಲಿ ಶಿಲಾ ಮೂರ್ತಿಗೆ ಗಂಗಾ ಸ್ನಾನ ಸೇರಿದಂತೆ ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಿ, ತದನಂತರ ಮಹಿಳೆಯರ ಕುಂಭಮೇಳದೊಂದಿಗೆ ದೇವಸ್ಥಾನಕ್ಕೆ ಮೆರವಣಿಗೆ ಮೂಲಕ ತರಲಾಯಿತು.

ಮೆರವಣಿಗೆಯಲ್ಲಿ ಸಮಾಳ, ಡ್ರಮ್ ಸೆಟ್, ಬ್ಯಾಂಡ್ ಸೆಟ್ ಸೇರಿದಂತೆ ಇತರೆ ಕಲಾಮೇಳಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗನ್ನು ನೀಡಿದವು.

ಮೆರವಣಿಗೆ ನಗರದ ತುಂಗಭದ್ರಾ ನದಿ ತಟದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಿಂದ ಪ್ರಾರಂಭಗೊಂಡು, ಹಳೇ ಪಿ.ಬಿ. ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ, ಸಾರ್ವಜನಿಕ ಆಸ್ಪತ್ರೆ ರಸ್ತೆಯ ಮೂಲಕ ಹಾದು, ಇಂದ್ರಾನಗರದ ಊರಮ್ಮ ದೇವಿ ದೇವಸ್ಥಾನದಲ್ಲಿ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್, ನಾಗರಾಜ್ ಪರ್ಕಿ, ವೆಂಕಟೇಶ್, ಮಂಜುನಾಥ್ ಚಿಂಚಲಿ, ಸಿದ್ದೇಶ್ ಬೇಡರ್, ಕೃಷ್ಣಮೂರ್ತಿ, ರಂಗೋಜಿರಾವ್, ವಕೀಲರು ಮಾರುತಿ ಬೇಡರ್, ಹೊನ್ನಪ್ಪ ಬೇಡರ್, ಸಿದ್ದಪ್ಪ ಇತರರು ಹಾಜರಿದ್ದರು.

## ಭಾಸ್ಕರ್ ಕೊಗ್ಗ ಕಾಮತ್‌ಗೆ ಕರ್ನಾಟಕ ಸುವರ್ಣ ಕಣ್ಮಣಿ ಪ್ರಶಸ್ತಿ



ದಾವಣಗೆರೆ, ಫೆ.16- ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಗೊಂಬೆಯಾಟ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಅವರಿಗೆ 'ಕರ್ನಾಟಕ ಸುವರ್ಣ ಕಣ್ಮಣಿ' ಪ್ರಶಸ್ತಿ ಲಭಿಸಿದೆ.

ಯಕ್ಷಗಾನ ಕಲೆಯನ್ನು ಅರ್ಧ ಶತಮಾನದಿಂದ ದೇಶ ವಿದೇಶಗಳಲ್ಲಿ ವೈಭವೀಕರಿಸಿದ ಮಹತ್ತರ ಸಾಧನೆ ಗುರುತಿಸಿ, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಹಾಗೂ ಯಕ್ಷರಂಗ ಯಕ್ಷಗಾನ ಸಂಸ್ಥೆ ಪ್ರಶಸ್ತಿ ನೀಡಿದೆ. ಕುಂದಾಪುರ ತಾಲ್ಲೂಕಿನ ಉಪ್ಪಿನಕುದ್ರುವಿನ ಯಕ್ಷಗಾನ ಅಕಾಡೆಮಿಯಲ್ಲಿ ಯಕ್ಷರಂಗದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

# ವಿಶ್ವವಿದ್ಯಾಲಯಕ್ಕೆ ಜನಪ್ರಿಯತೆಗಿಂತ ಗುಣಮಟ್ಟ ಬಹಳ ಮುಖ್ಯ

### ಅಂತರರಾಷ್ಟ್ರೀಯ ಶಿಕ್ಷಣ ಮೇಳಕ್ಕೆ ಚಾಲನೆ ನೀಡಿದ ಜಿಎಂ ವಿವಿ ಉಪ ಕುಲಪತಿ ಡಾ.ಹೆಚ್.ಡಿ. ಮಹೇಶಪ್ಪ

ದಾವಣಗೆರೆ, ಫೆ.16- ಯಾವುದೇ ವಿಶ್ವವಿದ್ಯಾಲಯವಾಗಲೀ ಜನಪ್ರಿಯತೆಗಿಂತ ಅಲ್ಲಿನ ಗುಣಮಟ್ಟದ ಶಿಕ್ಷಣ ಬಹಳ ಮುಖ್ಯ ಎಂದು ಜಿಎಂ ವಿವಿ ಉಪ ಕುಲಪತಿ ಡಾ.ಹೆಚ್.ಡಿ. ಮಹೇಶಪ್ಪ ತಿಳಿಸಿದರು.

ನಗರದ ಜಿ.ಎಂ ವಿಶ್ವವಿದ್ಯಾಲಯದಲ್ಲಿ ಫೆ.13ರಂದು ಕಾಲೇಜಿನ ಕೇಂದ್ರ ಗ್ರಂಥಾಲಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಶಿಕ್ಷಣ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು. ವಿಶ್ವವಿದ್ಯಾಲಯದ ಕ್ರಮಾಂಕವೇ ಮುಖ್ಯ ಅಂಶವಲ್ಲ. ಕ್ರಮಾಂಕಗಳು ಇರುತ್ತವೆ. ಆದರೆ ಎಲ್ಲದಕ್ಕೂ ಮಿಗಿಲಾಗಿ, ಗುಣಮಟ್ಟವೇ ಬಹು ಮುಖ್ಯ ಎಂದು ಹೇಳಿದರು.



ಉನ್ನತ ಅಧ್ಯಯನ ಮುಂದುವರೆಸಲು ಅತ್ಯುತ್ತಮ ಮಾರ್ಗವೆಂದರೆ ಕ್ಯಾಂಪಸ್ ಅನುಭವಿಸುವ ಆರಾಮತೆ ಹಾಗೂ ಸುರಕ್ಷತೆ. ಇದು ಶೈಕ್ಷಣಿಕ ಜೀವನದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತದೆ ಎಂದು ವಿವರಿಸಿದರು.


ಅನೇಕ ವಿದ್ಯಾರ್ಥಿಗಳಿಗೆ ವಿದೇಶ ಉನ್ನತ ಶಿಕ್ಷಣದ ಬಗ್ಗೆ ತಿಳಿಯುವ ಕುತೂಹಲ ಮತ್ತು ಸೇರ ಬಯಸುವ ಆಸಕ್ತಿ ಇದ್ದು, ಅಂತಹ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಮೇಳವು ಸಹಕಾರಿಯಾಗಲಿದೆ ಎಂದು ಹೇಳಿದರು.

ಕುಲಸಚಿವ ಡಾ.ಬಿ.ಎಸ್. ಸುನೀಲ್ ಕುಮಾರ್ ಮಾತನಾಡಿ, ಮೇಳದಲ್ಲಿ ಸಿಗುವ ಮಾಹಿತಿ ಬಹಳಷ್ಟು ಆತ್ಮವಿಶ್ವಾಸ ನೀಡುತ್ತದೆ. ನಿರ್ಧಾರದ ಕುರಿತು ಗೊಂದಲಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಇದೊಂದು ಅದ್ಭುತ ಅವಕಾಶ ಎಂದರು.

ಜಿ.ಎಂ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಗಿರೀಶ್ ಬೋಳಕಟ್ಟಿ ಮಾತನಾಡಿ, ಜ್ಞಾನ ಪಡೆಯಲು ದೇಶ ಸುತ್ತು ಕೋಶ ಓದು ಎಂಬ ಹಿರಿಯರ ಮಾತಿದೆ. ಅಂತೆಯೇ ಜ್ಞಾನ ಪಡೆಯಲು ಎಷ್ಟು ಶಿಕ್ಷಣ ಪಡೆದರೂ ಸಾಲದು. ಅದು ನಿರಂತರವಾಗಿರಬೇಕು ಎಂದರು.

ಈ ವೇಳೆ ಬೆಂಗಳೂರಿನ ಎಜು ಟ್ರಸ್ಟ್ ಸಂಸ್ಥೆಯ ಸಿಇಓ ಅರುಣ್ ಪ್ರಸಾದ್, ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಸವಿತಾ ಅರುಣ್, ಜಿಎಂಯು ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಟಿ.ಆರ್. ತೇಜಸ್ವಿ ಕಟ್ಟಿಮನಿ ಇದ್ದರು.

ಶಿವರಾತ್ರಿ ಪ್ರಯುಕ್ತ
ಶಿವ ಶಕ್ತಿ ಸಾಧನಾ ಯೋಗ ಶಿಬಿರ




ಉಚಿತ



ಸಮಯ : ಸಂಜೆ 6.30 ರಿಂದ 8.00 ಗಂಟೆಯವರೆಗೆ
ದಿನಾಂಕ : 17.02.2025 ಸೋಮವಾರದಿಂದ 25.02.2025ರ ವರೆಗೆ
15 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು, ಪುರುಷ, ಮಹಿಳೆಯರು, ವಯೋವೃದ್ಧರು ಭಾಗವಹಿಸಬಹುದು.
* ಪ್ರಾಣಾಯಾಮ * ಚಕ್ರಧ್ಯಾನ * ಮುದ್ರೆ * ತ್ರಾಟಕಧ್ಯಾನ * ಶಿವಶಕ್ತಿ ಕುಂಡಲಿನಿ ಧ್ಯಾನ * ಕಾಸ್ಮಿಕ್ ಹೀಲಿಂಗ್ ವಿಧಾನಗಳನ್ನು ಹೇಳಿಕೊಡಲಾಗುವುದು.
ಸ್ಥಳ : ದಿವ್ಯ ಯೋಗ ಮಂದಿರ
# 3632, 8ನೇ ಮೇನ್, 7ನೇ ಕ್ರಾಸ್, ಮೆಡಿಕಲ್ ಬಾಯ್ಸ್ ಹಾಸ್ಟೆಲ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಫೋ. : 99726 00713

# ನೀರಿನ ಮೇಲೆ ಹೆಸರು ಬರೆಯುವ ಸಾಧನೆ ನಿಮ್ಮದಾಗಲಿ

## ಜಿ ಬೇವಿನಹಳ್ಳಿ : ಶಾಲಾ ಅಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬಿ.ಎಲ್.ಗಂಗಾಧರ್ ನಿಟ್ಟೂರ್ ಹಾರೈಕೆ



ಮಲೇಬೆನ್ನೂರು, ಫೆ.15- ಕಾಣುವುದಾದರೆ ದೊಡ್ಡ ಕನಸನ್ನು ಕಾಣಿ, ಮಾಡುವುದಾದರೆ ದೊಡ್ಡ ಸಾಧನೆ ಮಾಡಿ ಎಂಬ ಅಬ್ದುಲ್ ಕಲಾಂ ಅವರ ಮಾತಿನಂತೆ ನಿಮ್ಮ ಕನಸು ನಿಮ್ಮನ್ನು ಸದಾ ಎಚ್ಚರಿಸುತ್ತಾ, ಪ್ರಯತ್ನದ ಕಡೆ ಮುಖ ಮಾಡಿಸಲಿ ಎಂದು ಶಿಕ್ಷಕ ಹಾಗೂ ಸಾಹಿತಿ ಬಿ.ಎಲ್. ಗಂಗಾಧರ್ ನಿಟ್ಟೂರ್ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಜಿ.ಬೇವಿನಹಳ್ಳಿ ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ಪ್ರೌಢಶಾಲೆಯಲ್ಲಿ ಶುಕ್ರವಾರ ಹರಿಹರ ತಾ. ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ಅಂಗಳದಲ್ಲಿ ಸಾಹಿತ್ಯೋತ್ಸವ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು 'ದಾಸ ಸಾಹಿತ್ಯ ಹಾಗೂ ಪರೀಕ್ಷಾ ಪೂರ್ವ ತಯಾರಿ' ವಿಷಯ ಕುರಿತು ಮಾತನಾಡಿದರು.

ಮರದ ಮೇಲೆ ಮತ್ತು ಬಂಡೆ ಕಲ್ಲಿನ ಮೇಲೆ ಯಾರು ಬೇಕಾದರೂ ತಮ್ಮ ಹೆಸರು ಬರೆಯಬಹುದು. ಆದರೆ ನೀರಿನ ಮೇಲೆ ಹೆಸರು ಬರೆಯುವ ಪ್ರಯತ್ನ ಬಹು ದೊಡ್ಡ ಸಾಹಸ ಮತ್ತು ಸಾಧನೆಯೇ ಸರಿ ಎಂದು ಕಲಾಂ ಹೇಳಿದ್ದಾರೆ. ಅಂತಹ ಸಾಧನೆ ನಿಮ್ಮದಾಗಲಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಪುರಂದರ ದಾಸರ ವಾಣಿಯಂತೆ ಗುರುಗಳಿಗೆ ವಿಧೇಯರಾಗಿ ಅವರ ಸಲಹೆ, ಸೂಚನೆ ಮತ್ತು ಸೂಕ್ತ ಮಾರ್ಗದರ್ಶನದಲ್ಲಿ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಪಡೆಯಿರಿ ಎಂದು ಶುಭ ಹಾರೈಸಿದರು.

ಬೆಟ್ಟದ ತುದಿ ನಮ್ಮ ಗುರಿಯಾಗಿದ್ದರೂ ಹತ್ತುವ ಕಾಲಿನ ಕಡೆ ನಮ್ಮ ಗಮನ ಇರಬೇಕು ಎಂಬ ನುಡಿಯಂತೆ ಏಕಾಗ್ರತೆ, ಸತತ ಅಭ್ಯಾಸ, ನಿರಂತರ ಪ್ರಯತ್ನದಿಂದ ಏನು ಬೇಕಾದರೂ ಸಾಧಿಸಬಹುದು.

ಹಿಂದಿನ ಇತಿಹಾಸ ತಿಳಿದವರು ಮಾತ್ರ ಹೊಸ ಇತಿಹಾಸ ಸೃಷ್ಟಿಸಬಲ್ಲರು. ಹಾಗಾಗಿ ನಿಮ್ಮ ಶಾಲೆಯ ಪೂರ್ವ ಇತಿಹಾಸ ಅರಿತು ಹೊಸ ಇತಿಹಾಸ ಬರೆಯುವ ಮೂಲಕ ಶಾಲೆಗೂ ಹಾಗೂ ಹೆತ್ತವರಿಗೂ ಕೀರ್ತಿ ತನ್ನರಿ ಎಂದು ಗಂಗಾಧರ್ ಹೇಳಿದರು.

ನಂದಿತಾವರೆ ಬಸವೇಶ್ವರ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಬಿ.ಪಿ.ಉಮೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನ್ನಡ ಪರ ಹೋರಾಟಗಾರ ಎಕ್ಕೆಗೊಂದಿ ರುದ್ರಗೌಡ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಜಿಲ್ಲಾ ಕಸಾಪ ಸದಸ್ಯ ರಿಯಾಜ್ ಅಹ್ಮದ್, ತಾ. ಕಸಾಪ ಸಂಘಟನಾ ಕಾರ್ಯದರ್ಶಿ ಹೆಚ್.ಎಂ.ಸದಾನಂದ, ಸಿದ್ದಲಿಂಗೇಶ್ವರ ಪ್ರೌಢ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಕಮಲಾಕ್ಷಪ್ಪ ಕಲ್ಲೇರ, ಹೋಬಳಿ ಕಸಾಪ ಕಾರ್ಯದರ್ಶಿ ಚಂದ್ರಶೇಖರ್ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹರಿಹರ ತಾ. ಕಸಾಪ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ ಅವರು ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಿ, ಸರಿ ಉತ್ತರ ಹೇಳಿದವರಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡಿದರು.

ಮಲೇಬೆನ್ನೂರು ಹೋಬಳಿ ಕಸಾಪ ಅಧ್ಯಕ್ಷ ದಂಡಿ ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲಾ ಶಿಕ್ಷಕ ಬಿ.ವಿ.ನಾಗರಾಜ್ ಸ್ವಾಗತಿಸಿದರು. ಶಿಕ್ಷಕ ಹೆಚ್.ವಿ.ಶಿವನಗೌಡ ನಿರೂಪಣೆ ಮಾಡಿದರೆ, ಕೊನೆಯಲ್ಲಿ ಶಿಕ್ಷಕ ಕೆ.ಎಂ. ರವೀಂದ್ರ ವಂದಿಸಿದರು.

# ದೆಹಲಿ ರೈಲ್ವೆ ನಿಲ್ದಾಣದಲ್ಲಿ ಕಾಲ್ತುಳಿತ

**(1ನೇ ಪುಟದಿಂದ)** ಅವರು ಎಸ್ಕಲೇಟರ್ ಹಾಗೂ ಕಾಲ್ಸೇತುವೆಯ ಮೂಲಕ ಅಲ್ಲಿಗೆ ತೆರಳುವ ಪ್ರಯತ್ನ ನಡೆಸಿದರು. ಇದರಿಂದಾಗಿ ತೀವ್ರ ನೂಕುನುಗ್ಗಲು ಹಾಗೂ ಕಾಲ್ತುಳಿತ ಉಂಟಾಗಿ 18 ಜನರು ಸಾವನ್ನಪ್ಪಿದ್ದಾರೆ ಎಂದು ರೈಲ್ವೆ ಮಂಡಳಿಯ ಮಾಹಿತಿ ಮತ್ತು ಪ್ರಚಾರ ವಿಭಾಗದ ಕಾರ್ಯಕಾರಿ ನಿರ್ದೇಶಕ ದಿಲೀಪ್ ಕುಮಾರ್ ತಿಳಿಸಿದ್ದಾರೆ.

ಘಟನೆ ನಡೆದ ಸಂದರ್ಭದಲ್ಲಿ ಪ್ಲಾಟ್‌ಫಾರಂ ನಂಬರ್ 14ರಲ್ಲಿ ಪಾಟ್ನಾಗೆ ತೆರಳುವ ಮಗಧ್ ಎಕ್ಸ್‌ಪ್ರೆಸ್ ಹಾಗೂ ಪ್ಲಾಟ್‌ಫಾರಂ ನಂಬರ್ 15ರಲ್ಲಿ ನವದೆಹಲಿ - ಜಮ್ಮು ಉತ್ತರ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲುಗಳು ನಿಂತಿದ್ದವು.

ಜನರು ಪ್ರಯಾಗ್‌ರಾಜ್ ಎಕ್ಸ್‌ಪ್ರೆಸ್ ಹಾಗೂ ಪ್ರಯಾಗ್‌ರಾಜ್ ಸ್ಪೆಷಲ್ ರೈಲುಗಳ ನಡುವೆ ಗೊಂದಲ ಮಾಡಿಕೊಂಡ ಕಾರಣಕ್ಕಾಗಿ ನೂಕುನುಗ್ಗಲು ಹಾಗೂ ಕಾಲ್ತುಳಿತ ಸಂಭವಿಸಿದೆ ಎಂಬುದು ಆರಂಭಿಕ ತನಿಖೆಯಿಂದ ತಿಳಿದು ಬಂದಿರುವುದಾಗಿ ದೆಹಲಿ ಪೊಲೀಸರು ಹೇಳಿದ್ದಾರೆ.

ಗೊಂದಲಕ್ಕೀಡಾದ ಜನರು 25 ಅಡಿ ಅಗಲದ ಕಾಲ್ಸೇತುವೆ ಮೂಲಕ ಇನ್ನೊಂದು ಪ್ಲಾಟ್ ಫಾರಂಗೆ ತೆರಳಲು ಮುಂದಾದರು. ಇದರಿಂದಾಗಿ ತೀವ್ರ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು. ನೂಕುನುಗ್ಗಲು ಎಷ್ಟಾಗಿತ್ತು ಎಂದರೆ ಐವರು ಉಸಿರು ಕಟ್ಟಿ ಸಾವನ್ನಪ್ಪಿದ್ದಾರೆ. ಉಳಿದ 13 ಜನ ಕಲ್ತುಳಿತಕ್ಕೆ ಸಿಲುಕಿ ಕೊನೆಯುಸಿರು ಎಳೆದಿದ್ದಾರೆ.

ಮೃತರ ಕುಟುಂಬಕ್ಕೆ ತಲಾ ಹತ್ತು ಲಕ್ಷ ರೂ. ನೆರವು ನೀಡುವುದಾಗಿ ರೈಲ್ವೆ ಸಚಿವಾಲಯ ತಿಳಿಸಿದೆ. ತೀವ್ರವಾಗಿ ಗಾಯಗೊಂಡವರಿಗೆ ತಲಾ 2.5 ಲಕ್ಷ ರೂ. ಹಾಗೂ ಸಣ್ಣ ಗಾಯಗಳಾದವರಿಗೆ 1 ಲಕ್ಷ ರೂ. ನೀಡುವುದಾಗಿ ತಿಳಿಸಲಾಗಿದೆ.

ರೈಲ್ವೆ ನಿಲ್ದಾಣದಲ್ಲಿ ಪ್ರತಿ ಗಂಟೆಗೆ 1500 ಜನರಲ್ ಟಿಕೆಟ್‌ಗಳನ್ನು ಮಾರಾಟ ಮಾಡಲಾಗುತ್ತಿತ್ತು. ಇದೂ ಸಹ ಜನಸಂದಣಿ ಹೆಚ್ಚಾಗಲು ಕಾರಣವಾಗಿತ್ತು. ಪ್ಲಾಟ್‌ಫಾರಂ 14 ಹಾಗೂ ಪ್ಲಾಟ್‌ಫಾರಂ 16ರ ಎಸ್ಕಲೇಟರ್ ಬಳಿ ಕಾಲ್ತುಳಿತ ಸಂಭವಿಸಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆ ತಪ್ಪಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

### ಕಾಲ್ತುಳಿತದ ನಂತರ ಭದ್ರತೆ ಹೆಚ್ಚಳ

ನವದೆಹಲಿ ಫೆ. 16 - ಶನಿವಾರ ರೈಲ್ವೆ ನಿಲ್ದಾಣದಲ್ಲಿ ಕಾಲ್ತುಳಿತ ಸಂಭವಿಸಿ 18 ಜನರು ಮೃತಪಟ್ಟ ನಂತರ, ಭಾನುವಾರದಂದು ಹೆಚ್ಚಿನ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಭದ್ರತಾ ಸಿಬ್ಬಂದಿ ಧ್ವನಿವರ್ಧಕಗಳ ಮೂಲಕ ನಿರಂತರವಾಗಿ ರೈಲುಗಳ ಬಗ್ಗೆ ಮಾಹಿತಿ ನೀಡುತ್ತಿದ್ದರು. ರೈಲ್ವೆ ಭದ್ರತಾ ಪಡೆಯ ಹಿರಿಯ ಅಧಿಕಾರಿಗಳು ನಿರಂತರವಾಗಿ ನಿಲ್ದಾಣದಲ್ಲಿ ನಿಗಾ ವಹಿಸಿದ್ದರು.

# ನದಿಗಳ ಶುದ್ಧತೆಗೆ ಕಠಿಣ ಕಾನೂನು ರೂಪಿಸಲಿ

**(1ನೇ ಪುಟದಿಂದ)** ಉಪಸಭಾಪತಿ ರುದ್ರಪ್ಪ ಲಮಾಣಿ ಮಾತನಾಡಿ, ನಾನು ಬಿರ್ಲಾ ಕಂಪನಿಯ ನೌಕರನಾಗಿ ಸೇರಿದ್ದ ಸಂದರ್ಭದಲ್ಲಿ ಕಂಪನಿಯ ಆಡಳಿತ ಮಂಡಳಿಯು ರುದ್ರಪ್ಪ ಲಮಾಣಿ ಕಾರ್ಮಿಕರ ಯೂನಿಯನ್ ಮಾಡುತ್ತಾರೆ ಎಂಬ ಉದ್ದೇಶದಿಂದ ನನ್ನನ್ನು ಕೆಲಸದಿಂದ ತೆಗೆದು ಹಾಕಲಾಯಿತು ಎಂದರು.

ಆದರೆ 1987ರಲ್ಲಿ ಕೋಡಿಯಾಲ ಹೊಸಪೇಟೆ ಗ್ರಾಮದ ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ಆಯ್ಕೆಯಾದ ಸಂದರ್ಭದಲ್ಲಿ ಈಗ ಮಠ ಇರುವ ಜಾಗವು ನದಿಯ ಮಹಾಪುರದಿಂದ ಜಲಾವೃತಗೊಂಡಿತು. ಈಗ ಇದೆ ಸ್ಥಳದಲ್ಲಿ ಜಗದೀಶ್ವರ ಶ್ರೀಗಳು ಕಠೋರ ತಪಸ್ಸು ಮಾಡುವ ಮೂಲಕ ಸುಂದರವಾದ ಮಠ ನಿರ್ಮಾಣವಾಗಿರುವುದನ್ನು ಶ್ರೀಗಳ ಸಾಧನೆ ಎಂದರು.

ಜಗದೀಶ್ವರ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ನೆನೆ ಗುದಿಗೆ ಬಿದ್ದಿದ್ದು, ಶೀಘ್ರದಲ್ಲಿ ರಂಭಾಪುರಿ ಶ್ರೀಗಳು ಮತ್ತು ಶ್ರೀಶೈಲ ಶ್ರೀಗಳ ಸಾನಿಧ್ಯದಲ್ಲಿ ರಾಣೇಬೆನ್ನೂರು ಹಾಲಿ ಮತ್ತು ಮಾಜಿ ಶಾಸಕರು ಸಭೆ ಕರೆದು, ಚರ್ಚಿಸಿ ಆದಷ್ಟು ಬೇಗನೆ ಕಾರ್ಯಕ್ರಮ ಆಯೋಜಿಸುವ ವಿಶ್ವಾಸ ವ್ಯಕ್ತಪಡಿಸಿದರು.

> **ಜಗದೀಶ್ವರ ಶ್ರೀಗಳ ಪಟ್ಟಾಧಿಕಾರ 2 ಬಾರಿ ಮುಂದಕ್ಕೆ ಹೋಗಿದೆ. ಹಾಗಾಗಿ ಶ್ರೀಶೈಲ ಶ್ರೀಗಳ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಿ ದಿನಾಂಕ ನಿಗದಿ ಮಾಡೋಣ ಮತ್ತು ಶ್ರೀಮಠದ ಭಕ್ತರಾಗಿರುವ ರುದ್ರಪ್ಪ ಲಮಾಣಿ ಅವರು ಮುಂಬರುವ ದಿನಗಳಲ್ಲಿ ಸಚಿವರಾಗಿ ಶ್ರೀಮಠಕ್ಕೆ 5 ಕೋಟಿ ರೂ.ಗಳ ಅನುದಾನ ನೀಡಲಿ.**
>
> **- ಅರುಣ ಕುಮಾರ್,** ಮಾಜಿ ಶಾಸಕ

ಶಾಸಕ ಪ್ರಕಾಶ್ ಕೋಳಿವಾಡ ಮಾತನಾಡಿ, ಪುಣ್ಯ ಕೋಟಿ ಮಠದ ಶಿಷ್ಯನಾಗಿ ಈ ಮಠದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವೆ. ಗಂಗಾರತಿ ಮಾದರಿಯಲ್ಲಿ ಇಲ್ಲಿನ ತುಂಗಭದ್ರಾ ನದಿಗೆ ತುಂಗಭದ್ರಾರತಿ ಮಾಡುವ ಮೂಲಕ ಜೀವ ಜಲದ ಪೂಜೆಯನ್ನು ಪರಿಚಯಿಸಿದ ಕೀರ್ತಿ ಪುಣ್ಯ ಕೋಟಿ ಮಠದ ಜಗದೀಶ್ವರ ಶ್ರೀಗಳಿಗೆ ಸಲ್ಲುತ್ತದೆ ಎಂದರು.

ಪರಿಸರ ಮತ್ತು ನದಿಗಳನ್ನು ಸಂರಕ್ಷಣೆ ಮಾಡದೆ ಹೋದರೆ ಮುಂದೊಂದು ದಿನ ಮನಷ್ಯ ಆಪತ್ತಿಗೆ ತುತ್ತಾಗುತ್ತಾನೆ. ಹಾಗಾಗಿ ಜೀವ-ಜಲ ರಕ್ಷಣೆಯನ್ನು ತುಂಗಭದ್ರಾರತಿ ಮೂಲಕ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಮಾಜಮುಖಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸವಣೂರು ದೊಡ್ಡಹುಣಸೇ ಕಲ್ಮಠದ ಚನ್ನಬಸವ ಶ್ರೀಗಳು, ವಿಜಯಪುರ ಸಿದ್ದಲಿಂಗೇಶ್ವರ ಮಠದ ಸಿದ್ದಲಿಂಗ ಶ್ರೀಗಳು, ನಾವಂದ ಶಿವಯೋಗಿ ಶಿವಾನಂದ ಶಿವಾಚಾರ್ಯ ಶ್ರೀಗಳು ಸಾನಿಧ್ಯ ವಹಿಸಿದ್ದರು.

ಜಿ.ಪಂ ಮಾಜಿ ಅಧ್ಯಕ್ಷ ಎಸ್.ಎಂ ವೀರೇಶ್ ಹನಗವಾಡಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣೇಶ್, ಮುಖಂಡ ಚಂದ್ರಶೇಖರ್ ಪೂಜಾರ್, ಸಿಂಡಿಕೇಟ್ ಮಾಜಿ ಸದಸ್ಯ ಕೆ.ಎನ್ ಪಾಟೀಲ್, ಹೆಚ್. ವಿಶ್ವನಾಥ್, ವಾಣಿ ಬಕ್ಕೇಶ್, ಶಶಿಕುಮಾರ್ ಮೆಹರ್ವಾಡೆ, ಗ್ರಾ.ಪಂ ಮಾಜಿ ಅಧ್ಯಕ್ಷ ಚೇತನ್, ಮಾಜಿ ಸದಸ್ಯ ಕರಿಯಪ್ಪ ಮ್ಯಾಳಗೇರ್, ಹಿರೇಮಠ ಕುಮಾರಸ್ವಾಮಿ. ರವೀಂದ್ರ ಪಾಟೀಲ್ ಸೇರಿದಂತೆ ಇತರರಿದ್ದರು.

# ಚಿರತೆಯಿಂದ ರಕ್ಷಣೆಗೆ ಕುತ್ತಿಗೆ ಪಟ್ಟಿ, ಸೌರ ಬೇಲಿ

**(1ನೇ ಪುಟದಿಂದ)** ಕಿಲೋಮೀಟರ್‌ಗೆ ಆರರಿಂದ ಏಳು ಚಿರತೆಗಳಿವೆ. ಈ ಭಾಗದಲ್ಲಿ ಕಬ್ಬು, ಬಾಳೆ, ದ್ರಾಕ್ಷಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಇವುಗಳು ಚಿರತೆಗಳು ಅಡಗಿಕೊಳ್ಳಲು ಅವಕಾಶ ಒದಗಿಸುತ್ತವೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಮುಲ್ ಸತ್ಪುತೆ ಹೇಳಿದ್ದಾರೆ.

ಅಲ್ಲದೆ ಸಾಕು ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಚಿರತೆಗಳು ವಸತಿ ಪ್ರದೇಶಕ್ಕೆ ಬರುತ್ತಿವೆ. ಕಳೆದ 24 ವರ್ಷಗಳಲ್ಲಿ ಮಾನವ ಹಾಗೂ ವನ್ಯಜೀವಿಗಳ ಸಂಘರ್ಷ ಹೆಚ್ಚಾಗುತ್ತಿದೆ ಎಂದವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಇತ್ತೀಚಿನ ತಂತ್ರಜ್ಞಾನಗಳನ್ನು ಆಧರಿಸಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದ್ದಾರೆ.

ಸೌರಶಕ್ತಿ ಆಧರಿತ ವಿದ್ಯುತ್ ಬೇಲಿಗಳು ಮನೆಗಳ ರಕ್ಷಣೆಗೆ ಉತ್ತಮವಾಗಿವೆ. ಬೇಲಿ ದಾಟಲು ಬರುವ ಚಿರತೆಗಳಿಗೆ ಮಾರಣಾಂತಿಕವಲ್ಲದ ವಿದ್ಯುತ್ ಆಘಾತವಾಗುತ್ತದೆ. ಇದರಿಂದ ಪ್ರಾಣಿಗಳು ಓಡಿ ಹೋಗುತ್ತವೆ ಎಂದು ಜುನ್ನಾರ್ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸ್ಮಿತಾ ರಾಜನ್ಸ್ ಹೇಳಿದ್ದಾರೆ.

ಚಿರತೆಗಳ ಕಾಟ ಅತಿ ಹೆಚ್ಚಾಗಿರುವ ಪ್ರದೇಶಗಳಿರುವ 150 ಮನೆಗಳಿಗೆ ಈ ಬೇಲಿ ಅಳವಡಿಸಲಾಗಿದೆ. ಇನ್ನೂ 650 ಬೇಲಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಅರಣ್ಯ ಇಲಾಖೆ ವತಿಯಿಂದ ಕೃತಕ ಬುದ್ಧಿವಂತಿಕೆ (ಎಐ) ಆಧರಿತ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳು ಚಿರತೆಗಳನ್ನು ಗುರುತಿಸುತ್ತವೆ. ತಕ್ಷಣವೇ ಎಚ್ಚರಿಕೆ ಗಂಟೆ ಭಾರಿಸುತ್ತವೆ. ಈ ಸದ್ದಿನಿಂದ ಚಿರತೆಗಳು ಓಡಿ ಹೋಗುತ್ತವೆ ಹಾಗೂ ಅರಣ್ಯಾಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ.

ರಾತ್ರಿ ವೇಳೆ ಪ್ರಾಣಿಗಳನ್ನು ಗುರುತಿಸುವ ಹಾಗೂ ಹೆಮ್ಮೆಟ್ಟಿಸುವ ವ್ಯವಸ್ಥೆಯನ್ನೂ ಸಹ ಅಳವಡಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ

ಇದರ ಜೊತೆಗೆ ಈ ಭಾಗದಲ್ಲಿನ ಕೃಷಿ ಕಾರ್ಮಿಕರಿಗೆ ವಿಶೇಷ ಕುತ್ತಿಗೆ ಪಟ್ಟಿಗಳನ್ನು ನೀಡಲಾಗಿದೆ. ಚಿರತೆಗಳು ಸಾಮಾನ್ಯವಾಗಿ ಮನುಷ್ಯರ ಕುತ್ತಿಗೆಗೆ ಬಾಯಿ ಹಾಕುತ್ತವೆ. ಹೀಗಾಗಿ ಈ ಪಟ್ಟಿಗಳು ಉಪಯುಕ್ತ ಎಂದು ರಾಜನ್ ಹೇಳಿದ್ದಾರೆ.

ಕೊರೊನಾ ಅವಧಿಯಲ್ಲಿ ಮಾನವ ಚಟುವಟಿಕೆಗಳು ಕಡಿಮೆಯಾಗಿದ್ದವು. ಈ ಅವಧಿಯಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗಿದೆ. ಚಿರತೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಅಧಿಕಾರದಲ್ಲಿ ಕರ್ನಾಟಕ ಪ್ರಥಮ

**(1ನೇ ಪುಟದಿಂದ)** ಇದು ವಾಸ್ತವವಾಗಿ ಜಾರಿಯಾಗಿದೆ. ಬಲಿಷ್ಠ ಪಂಚಾಯತ್ ವ್ಯವಸ್ಥೆಯಿಂದ ಗ್ರಾಮೀಣಾಭಿವೃದ್ಧಿಯು ಬಲಿಷ್ಠವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸಹಭಾಗಿತ್ವ ಹಾಗೂ ಒಳಗೊಳ್ಳುವಿಕೆಯ ಬೆಳವಣಿಗೆ ದೊರೆಯುತ್ತದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. 72.23 ಅಂಕಗಳೊಂದಿಗೆ ಸಮೀಕ್ಷೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಉತ್ತರ ಪ್ರದೇಶ ಹಾಗೂ ಗುಜರಾತ್ ನಂತರದ ಸ್ಥಾನಗಳಲ್ಲಿವೆ.



# ತನಿಷ್ಕ್ ಶೋರೂಂನ 5ನೇ ವಾರ್ಷಿಕೋತ್ಸವ

ದಾವಣಗೆರೆ, ಫೆ. 16 - ನಗರದ ಎ.ವಿ.ಕೆ. ರಸ್ತೆಯಲ್ಲಿರುವ ತನಿಷ್ಕ್ ಚಿನ್ನಾಭರಣ ಶೋರೂಂನ ಐದನೇ ವಾರ್ಷಿಕೋತ್ಸವವನ್ನು ಎಸ್ಪಿ ಉಮಾ ಪ್ರಶಾಂತ್ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಸಮಾರಂಭದಲ್ಲಿ ಮಾಡನಾಡಿದ ಎಸ್ಪಿ ಉಮಾ ಪ್ರಶಾಂತ್ ಅವರು, ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಕಳ್ಳತನ, ಮೋಸ, ಆನ್‌ಲೈನ್ ವಂಚನೆ ಸೇರಿದಂತೆ ಇತರೆ ವಂಚನೆಗಳಿಂದ ನಾಗರಿಕರು ಮೋಸ ಹೋಗದಂತೆ ಎಚ್ಚರ ವಹಿಸಲು ಸಲಹೆ ನೀಡಿದರು.

ಈ ವಾರ್ಷಿಕೋತ್ಸವದ ಪ್ರಯುಕ್ತ ಹೊಸ ವಿನ್ಯಾಸದ ವಜ್ರದ ಆಭರಣಗಳು, ಮತ್ತು ಚಿನ್ನದ ಬಳೆಗಳು ಸೇರಿದಂತೆ ಇನ್ನೂ ಮುಂತಾದ ಆಭರಣಗಳನ್ನು ಪ್ರದರ್ಶನಗೊಳಿಸಲಾಯಿತು. ಚಿನ್ನಾಭರಣ ಮತ್ತು ಡೈಮಂಡ್ ಆಭರಣಗಳ ಮೇಲೆ ಶೇ. 20ರಷ್ಟು ರಿಯಾಯಿತಿ ಹಾಗೂ ಚಿನ್ನದ ಮೇಲೆ ವಿನಿಮಯ ಮೌಲ್ಯ ಶೇ.100 ರಷ್ಟು ಹೆಚ್ಚುವರಿಯಾಗಿ ದೊರೆಯಲಿದೆ ಎಂದು ತನಿಷ್ಕ್ ಫ್ರಾಂಚೈಸಿ ವ್ಯವಸ್ಥಾಪಕ ನಿರ್ದೇಶಕ ಅಬ್ರಹಾರ್ ತಿಳಿಸಿದರು.

ಈ ಸಂದರ್ಭದಲ್ಲಿ ಎಸ್ಪಿ ಉಮಾ ಪ್ರಶಾಂತ್, ಮಾಲೀಕರಾದ ಕೆ. ಜಾವೀದ್ ಸಾಬ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ಕೆ.ಜೆ. ಅಬ್ರಹಾರ್, ಜಾಹನ್‌ಹರ ಜಾವೀದ್, ಕೆ.ಜೆ. ಅಫಾಕ್ ರಜ್ವಿ ಸೇರಿದಂತೆ ಶೋರೂಂನ ಸಿಬ್ಬಂದಿಗಳು ಮತ್ತು ಗ್ರಾಹಕರು ಉಪಸ್ಥಿತರಿದ್ದರು.

# ನಗರದ ಮಾರುಕಟ್ಟೆಯಲ್ಲಿ ಟ್ರಾಫಿಕ್ ಸಮಸ್ಯೆ

## ಲಯನ್ ಫರ್ಜನೆಗೆ ರೋಡ್ ಕ್ಲಿಯರ್, ನಂತರ ಅದೇ ರಾಗ ಅದೇ ಹಾಡು..!

ಬಿ. ಸಿಕಂದರ್



ಏ.. ಆಟೋ, ಸ್ವಲ್ಪ ಸೈಡ್‌ಗೆ ಬಾರಪ್ಪ. ಆ ನಿಂಬೆ ಹಣ್ಣಿನ ಗಾಡಿ ಮುಂದೆ ತಳ್ಳು, ಇದ್ಯಾರಪ್ಪ ಸ್ಕೂಟರ್ ರಸ್ತೆಗೆ ಅಡ್ಡ ಹಾಕ್ದೋರು, ಸೈಡ್‌ಗೆ ತಳ್ಳಿ. ಏ.. ಬೆಳ್ಳುಳ್ಳಿ ಇನ್ನೊಂದು ಸಾರಿ ರಸ್ತೆಗೆ ಗಾಡಿ ಬಂದ್ರೆ ನೋಡು ನಿನಗೆ..!

ಹೀಗೆ ಧ್ವನಿ ವರ್ಧಕದಲ್ಲಿ ಎಚ್ಚರಿಕೆ ನೀಡುತ್ತಲೇ ಮುಂದೆ ಸಾಗುವ 'ಲಯನ್ ಫರ್ಜನೆಗೆ' ತತ್ತರಿಸಿ ವ್ಯಾಪಾರಸ್ಥರು ಕ್ಷಣ ಮಾತ್ರ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತಾರೆ. ಲಯನ್ ಮರೆಯಾದ ಬಳಿಕ ಸಂಜೆಯವರೆಗೂ ಅದೇ ರಾಗ, ಅದೇ ಹಾಡು.!

ಇಂತಹ ದೃಶ್ಯವಳಿಗಳು ನಿತ್ಯವೂ ಕೆ.ಆರ್. ಮಾರ್ಕೆಟ್, ಚಾಮರಾಜೇಂದ್ರ, ವೃತ್ತ, ಹಾಸಬಾವಿ ವೃತ್ತ ಮತ್ತು ಚೌಕಿ ಪೇಟೆಯಲ್ಲಿ ಕಾಣಿಸುತ್ತವೆ.

ತಳ್ಳು ಗಾಡಿಯ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಸ್ಥರು ಹಾಗೂ ಗ್ರಾಮೀಣ ಭಾಗದ ರೈತರು ಮಾರುಕಟ್ಟೆಯಲ್ಲಿ ಪ್ರತಿದಿನ ರಸ್ತೆಯಲ್ಲೇ ಅಂಗಡಿ ತೆರೆಯುವುದರಿಂದ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳ ಸಂಚಾರಕ್ಕೆ ಅಡ್ಡಿಯಾಗಿದ್ದು, ಮಾರುಕಟ್ಟೆ ದಾಟುವುದಕ್ಕೆ ನಿತ್ಯವೂ ಹರಸಾಹಸ ಪಡುವ ಪ್ರಸಂಗ ಎದುರಾಗಿದೆ.

ಸುಗಮ ಸಂಚಾರಕ್ಕಾಗಿ ಸಂಚಾರಿ ಪೊಲೀಸರು ಪ್ರತಿ ದಿನ ಸೂಕ್ತ ಕ್ರಮ ಕೈಗೊಂಡರೂ ಕೆಲವೊಮ್ಮೆ ಭಾರೀ ವಾಹನಗಳು, ಈ ಭಾಗಕ್ಕೆ ಪ್ರವೇಶಿಸಿದಾಗ ಗಂಟೆ ಗಟ್ಟಲೆ ಟ್ರಾಫಿಕ್ ಸಮಸ್ಯೆ ಎದುರಾಗಿ ವಾಹನ ಸವಾರರಲ್ಲಿ ಸಂಘರ್ಷಗಳು ನಡೆಯುತ್ತಿವೆ.

ಸುಮಾರು ವರ್ಷಗಳಿಂದ ಜಲ್ವಂತ ಸಮಸ್ಯೆ ಎದುರಿಸುತ್ತಿರುವ ಈ ಭಾಗದ ಚಿಕ್ಕ ಪುಟ್ಟ ಅಂಗಡಿಗಳಿಗೆ ತೀವ್ರ ತೊಂದರೆಯಾಗುತ್ತಿದ್ದು, ಇಲ್ಲಿ ಬರುವ ವಾಹನಗಳಿಗೆ ಸೂಕ್ತ ನಿಲ್ದಾಣದ ವ್ಯವಸ್ಥೆ ಇಲ್ಲದಿರುವುದರಿಂದ ಎಲ್ಲೆಂದರಲ್ಲಿ ವಾಹನ ನಿಲ್ಲಿಸುತ್ತಿದ್ದಾರೆ. ಸಾರ್ವಜನಿಕರಿಗೆ ಅನುಕೂಲ ಆಗುವಂತೆ ಎಸ್ಪಿ ಉಮಾ ಪ್ರಶಾಂತ್ ಅವರಿಗೆ ಇಲ್ಲಿನ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಸೂಚಿಸಬೇಕೆಂದು ಹಿರಿಯ ನಾಗರಿಕರು ಸೇರಿದಂತೆ, ಸ್ಥಳೀಯರು ಮನವಿ ಮಾಡುತ್ತಿದ್ದಾರೆ.

## ಭಾರತದಲ್ಲಿನ ಮತದಾನಕ್ಕಾಗಿ ಅಮೆರಿಕದ ಹಣ: ಬಿಜೆಪಿ ತರಾಟೆ

**(1ನೇ ಪುಟದಿಂದ)** ಮಾಳವೀಯ ಹೇಳಿದ್ದಾರೆ.

ಭಾರತದ ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆಯ ಪಾರದರ್ಶಕತೆ ಹಾಗೂ ಒಳಗೊಳ್ಳುವಿಕೆಯ ಬಗ್ಗೆ ಪ್ರಶ್ನಿಸುವವರು ಇಡೀ ಚುನಾವಣಾ ಆಯೋಗವನ್ನು ವಿದೇಶಿ ನಿರ್ವಾಹಕರಿಗೆ ಒಪ್ಪಿಸುವಲ್ಲಿ ಯಾವುದೇ ಹಿಂಜರಿಕೆ ತೋರಲಿಲ್ಲ ಎಂದವರು ಟೀಕಿಸಿದ್ದಾರೆ.

ಭಾರತದ ಮತದಾನ ಬಲಗೊಳಿಸಲು ನೀಡಲಾಗುತ್ತಿದ್ದ 21 ದಶಲಕ್ಷ ಡಾಲರ್ ಸೇರಿದಂತೆ ವಿವಿಧ ದೇಶಗಳಿಗೆ ನೀಡಲಾಗುತ್ತಿದ್ದ 486 ದಶಲಕ್ಷ ಡಾಲರ್ ಅನುದಾನ ರದ್ದುಗೊಳಿಸುವುದಾಗಿ ಮಸ್ಕ್ ನೇತೃತ್ವದ ದಕ್ಷತಾ ಇಲಾಖೆ ತಿಳಿಸಿತ್ತು.

**ಸ್ನೂಕರ್ ಕ್ಲಬ್‌ಗೆ ಕೆಲಸಕ್ಕೆ ಬೇಕಾಗಿದೆ**
ಸ್ಥಳ: ಕೋರ್‌ನರ್ ಪಾಕೆಟ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ
ಸಮಯ: ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ
ಸಂಬಳ: 9,000 - 10,000
ಸಂಪರ್ಕಿಸಿ: 9844731980

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**RCC ಮನೆ ಬಾಡಿಗೆಗೆ**
KTJ ನಗರ, 2ನೇ ಕ್ರಾಸ್, ದಾವಣಗೆರೆ -2
99015 04452
80958 50729

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಲೀಸ್‌ಗೆ 1BHK ಮನೆಗಳು ಲಭ್ಯ**
ಸ್ಥಳ: ದಾವಣಗೆರೆ ನ್ಯಾಯಾಲಯ (Davangere Court) ಸಮೀಪ, ದೇವರಾಜ ಅರಸು ಲೇಔಟ್ 'A' Block ವಿಶಾಲ ಮತ್ತು ಸುಸಜ್ಜಿತ ಮನೆಗಳು ಲಭ್ಯ
96201 64304

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಸೇಲ್ಸ್ & ಮಾರ್ಕೆಟಿಂಗ್**
ಸೇಲ್ಸ್ & ಮಾರ್ಕೆಟಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

**TO LET**
2 BHK House for Lease
Doggalli Compound,
Near LIC Office,
K.R. Road, Davangere.
90359 66066

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**HOUSE FOR LEASE / RENT**
2 BHK- 30x50, 2nd floor- East Facing- close vicinity to DC office GMIT college, Shivagange choultry 5th cross, Mahalakshmi Badavane, Behind Kaveri Apartment, Davanagere .
99809 33002

**ಬೇಕಾಗಿದ್ದಾರೆ**
ಸ್ಟುಡಿಯೋ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಇರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಎಸ್. ಎಸ್ .ಎಲ್. ಸಿ ಆಗಿರುವ ವಿದ್ಯಾರ್ಥಿನಿಯರಿಗೆ, ಅಂಗವಿಕಲರಿಗೆ, ಮಹಿಳೆಯರಿಗೆ ಮೊದಲ ಆದ್ಯತೆ ನೀಡಲಾಗುವುದು.
ಸಂಪರ್ಕಿಸಿ : ಸಿನಿ ಸ್ಟುಡಿಯೋ
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, ದಾವಣಗೆರೆ.
91699 33344

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**3 BHK & 2 BHK ಮನೆ ಬಾಡಿಗೆಗೆ**
ತರಳಬಾಳು ನಗರದ ಹದಡಿ ರಸ್ತೆ ಲಕ್ಷ್ಮೀ ವೆಂಕಟೇಶ್ವರ ಗ್ರಾನೈಟ್ ಹಿಂಭಾಗದಲ್ಲಿ
1 ನೆಲ ಮಹಡಿ - 3 BHK
2. ಮೊದಲನೇ ಮಹಡಿ 2 BHK (ಹೊಸ ಮನೆ) ಕಾರ್ ಪಾರ್ಕಿಂಗ್, ಗಾರ್ಡನ್, ಬೋರ್‌ವೆಲ್, ನಗರ ಪಾಲಿಕೆ ನೀರಿನ ಸೌಲಭ್ಯವಿರುವ ಮನೆಗಳು ಬಾಡಿಗೆಗೆ ಇವೆ.
82772 51689

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ARTIGIFICIAL INTELLIGENCE (AI)**
Age group 11 years to 18 years, **Bruit Academy**
Nijalingappa Badavane.
97390 66956

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್ ಗಳು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ.
ವಾಟ್ಸಾಪ್ ನಂಬರ್ : 89711 19130, 98800 42597, 83174 04576

**ಹೊಸ ಶೆಡ್ಡು ಮಾರಾಟಕ್ಕಿದೆ**
ಕಾಳಿದಾಸ ಸರ್ಕಲ್
ಜಯನಗರ 10 x 12
ಹೊಸ ಶೆಡ್ಡು ಮಾರಾಟಕ್ಕಿದೆ.
80733 08073

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: **Best Lubricants**
Opp. to New Pvt Bus Stand PB Road, Davangere.
73380 33337

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
*NEET Long Term / Supplementary Exams*
97398 65711, 94822 44114

**WANTED**
* Telecaller's
* Sale's Executive's &
* Marketing Executive's
Age : 18 to 27 Salary+Incentive
Quali:PUC, Degree, Work place-Davanagere
Walk in Interview -Time:10.30 am-4 pm
99864 47909

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**ಜಾಗ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ಹತ್ತಿರ 10,000 ಅಡಿ ಕಮರ್ಷಿಯಲ್ ಜಾಗ ಮಾರಾಟಕ್ಕೆ ಇದೆ. ಕುಂದುವಾಡದಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟ್ 30x40 ಪೂರ್ವ - ಪಶ್ಚಿಮ
97315 12365
99862 34416

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

# ಮತದಾರ ಜಾಗೃತನಾಗದ ಹೊರತು ಪ್ರಜಾಪ್ರಭುತ್ವ ಯಶಸ್ಸು ಅಸಾಧ್ಯ: ತೇಜಸ್ವಿ ಪಟೇಲ್



ದಾವಣಗೆರೆ, ಫೆ. 16- ದಾವಣಗೆರೆ ಜಿಲ್ಲೆಯನ್ನಾಗಿಸಿದ್ದು ನಮ್ಮದೊಡ್ಡಪ್ಪ ಜೆ. ಹೆಚ್. ಪಟೇಲ್ ಅವರು. ಜಿಲ್ಲೆಯನ್ನಾಗಿಸಿದ ಸಮಾಜವಾದಿ ನಾಯಕನ ಆಶಯ ಈಡೇರಿಲ್ಲ ಎಂಬ ನೋವು ಇದೆ. ಇದಕ್ಕೆಲ್ಲಾ ರಾಜಕೀಯ ಪಕ್ಷಗಳು ಕಾರಣವೆಂದರೆ ಖಂಡಿತಾ ಅಲ್ಲ. ಪ್ರತಿಯೊಬ್ಬರದ್ದೂ ಇದರಲ್ಲಿ ಪಾತ್ರವಿದೆ. ಮತದಾರ ಜಾಗೃತನಾಗದ ಹೊರತು, ಪ್ರಜಾಪ್ರಭುತ್ವ ಯಶಸ್ವಿ ಆಗಲ್ಲ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಹೇಳಿದರು.

ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಿವಯೋಗ ಮಂದಿರದ ಸಭಾ ಭವನದಲ್ಲಿ ಸ್ವಾಭಿಮಾನಿ ಬಳಗವು ಇಂದು ಏರ್ಪಡಿಸಿದ್ದ ಕುಟುಂಬ ರಾಜಕಾರಣ, ಪ್ರಜಾಪ್ರಭುತ್ವ ಹಾಗೂ ಅಭಿವೃದ್ಧಿಗೆ ಮಾರಕವೇ? ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಹಾಗೂ ವಿಚಾರ ಸಂಕ್ರಾಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಚನ್ನಗಿರಿ ತಾಲ್ಲೂಕು ಕಾರಿಗನೂರಿನವರಾದ ನಾವುಗಳು ಶಿವಮೊಗ್ಗ ಜಿಲ್ಲೆಗೆ ಸೇರಿದ್ದೆವು. ದೇವರಾಜ ಅರಸು ಕೃಷಿ ಸುಧಾರಣೆ ತಂದಾಗ ಶಿವಮೊಗ್ಗದಲ್ಲಿ ಕ್ರಾಂತಿಕಾರಕ ಬದಲಾವಣೆ ಆಯಿತು. ಜೆ.ಹೆಚ್. ಪಟೇಲ್ ಅವರು ತನ್ನ ತಂದೆ ಜಮೀನ್ದಾರರಾದರೂ ಗೇಣಿದಾರರ ಪರ ಹೋರಾಟ ನಡೆಸಿದರು. ಶಿವಮೊಗ್ಗದಲ್ಲಿದ್ದ ಹೋರಾಟ ಮನೋಭಾವನೆ ಇಲ್ಲಿ ಕಂಡು ಬರುತ್ತಿಲ್ಲ. ದಾವಣಗೆರೆ ಜಿಲ್ಲೆಯು ಇಂದು ವ್ಯವಹಾರ ಜಿಲ್ಲೆಯಾಗಿದ್ದು, ಪಟೇಲರ ಆಶಯಕ್ಕೆ ಕೊಡಲಿ ಪೆಟ್ಟು ಬಿತ್ತು ಎಂಬ ನೋವು ಇದೆ ಎಂದರು.

ಜಿ.ಬಿ. ವಿನಯ್ ಕುಮಾರ್ ಅವರು ವಿಚಾರ ದಿಂದ ವಿಮುಖರಾಗಬಾರದು. ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲಿ. ಕರ್ನಾಟಕದಲ್ಲಿ ಹೊಸ ರಾಜಕೀಯ ಶಕ್ತಿಗೆ ಅವಕಾಶ ಇದೆ ಎನಿಸುತ್ತಿದೆ. ಕಾಂಗ್ರೆಸ್‌ಗೆ ಸಿದ್ದರಾಮಯ್ಯ, ಬಿಜೆಪಿಗೆ ಯಡಿಯೂರಪ್ಪ, ಜೆಡಿಎಸ್‌ಗೆ ದೇವೇಗೌಡರ ಕುಟುಂಬ ಅನಿವಾರ್ಯ ಎಂಬ ವಾತಾವರಣ ಇದೆ. ಈ ಮೂವರು ನಾಯಕರ ಮೇಲೆ ಯಾರು ಎಂಬ ಪ್ರಶ್ನೆಗೆ ಉತ್ತರ ಇಲ್ಲ. ವೈಯಕ್ತಿಕ ವರ್ಚಸ್ಸು ಇಲ್ಲ, ಹಣಬಲದಿಂದಲೇ ಗೆಲ್ಲುತ್ತಿದ್ದಾರೆ. ಹೊಸ ರಾಜಕೀಯ ಶಕ್ತಿ ಉದಯಕ್ಕೆ ಅವಕಾಶ ಇದ್ದು, ಸಾಮಾನ್ಯ ಜನರು ಮನಸ್ಸು ಮಾಡಿದರೆ ಹೊಸ ರಾಜಕೀಯ ಶಕ್ತಿ ಶಕ್ತಿಯುತವಾಗಲಿದೆ ಎಂದು ಅಭಿಪ್ರಾಯಪಟ್ಟರು.

ದುಡ್ಡಿಲ್ಲದೇ ಯಾವ ಕ್ಷೇತ್ರಗಳಲ್ಲಿಯೂ ಗೆಲ್ಲಲಾಗದು ಎಂಬ ಸ್ಥಿತಿಗೆ ಬಂದು ತಲುಪಿದ್ದೇವೆ. ಆರ್ಥಿಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮತದಾನ ಮಾಡಬೇಕು. ಅಂತರ ರಾಷ್ಟ್ರೀಯ, ದೇಶ, ರಾಜ್ಯ ಮತ್ತು ಜಿಲ್ಲೆಗಳ ವಿಚಾರಗಳಿಗೆ ಮತದಾರ ಆದ್ಯತೆ ಕೊಟ್ಟು ಹಕ್ಕು ಚಲಾಯಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಕುಟುಂಬ ರಾಜಕಾರಣದ ವಿರುದ್ಧ ಬಹಿರಂಗವಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಿರು ವುದು ಬದಲಾವಣೆಯ ಪರ್ವದ ಸಂಕೇತ. ವೈಚಾರಿಕತೆ ಬೀಜ ಬಿತ್ತಬೇಕೆಂಬುದು ನಮ್ಮ ಉದ್ದೇಶವೇ ಹೊರತು ದಾವಣಗೆರೆಯ ಕುಟುಂಬ ವೊಂದರ ವಿರುದ್ಧ ಮಾಡುತ್ತಿರುವ ಆಂದೋಲನ ಅಲ್ಲ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಕುಟುಂಬ ರಾಜಕಾರಣ ಹಾಸುಹೊಕ್ಕಾಗಿದ್ದು, ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದು ಪ್ರತಿಪಾದಿಸಿದರು.

34 ಕುಟುಂಬಗಳು ಬಲಿಷ್ಠವಾಗಿ ಬೆಳೆದು 140 ಕೋಟಿ ಜನರನ್ನು ನಿಯಂತ್ರಿಸುತ್ತಿವೆ. ಅವರೆಲ್ಲಾ ರಾಜ, ರಾಣಿಯಂತೆ ಬದುಕುತ್ತಿದ್ದಾರೆ. ಈ ವ್ಯವಸ್ಥೆ ಬದಲಾಗಬೇಕಿದೆ ಎಂದರು.

ಕುಟುಂಬ ರಾಜಕಾರಣದ ವಿರುದ್ಧ ಮಾತನಾಡಲು ಹಿಂದೇಟು ಹಾಗೂ ಭಯಪಡುವ ಇಂಥ ವಾತಾವರಣದಲ್ಲಿ ವಿದ್ಯಾರ್ಥಿಗಳು ಮುಕ್ತವಾಗಿ ಮಾತನಾಡಿರುವುದು ಒಳ್ಳೆಯ ಬೆಳವಣಿಗೆ. ದಾವಣಗೆರೆ ವ್ಯಾಪಾರ ಕೇಂದ್ರಿತ ನಗರ. ಸಾಂಸ್ಕೃತಿಕ, ವಿಚಾರವಂತ, ಬುದ್ಧವಂತ ನಗರವನ್ನಾಗಿ

### ವಿವಿಧ ವಿಚಾರಗಳ ಬಗ್ಗೆ ಪ್ರಬಂಧ ಸ್ಪರ್ಧೆ, ವಿಚಾರ ಸಂಕಿರಣ ಆಯೋಜನೆ

ಜಾತಿ ರಾಜಕಾರಣ, ಅಂಬೇಡ್ಕರ್ ವಿಚಾರಧಾರೆ, ದೇಶದ ಅಭಿವೃದ್ಧಿ ಸೇರಿದಂತೆ ಜನರಿಗೆ ಹತ್ತಿರವಾಗುವ ವಿಚಾರಗಳ ಕುರಿತಂತೆ ಇನ್ನೆರಡು ತಿಂಗಳಿನಲ್ಲಿ ಪ್ರಬಂಧ ಸ್ಪರ್ಧೆ, ವಿಚಾರ ಸಂಕಿರಣ ಹಾಗೂ ಸಂವಿಧಾನ ಸೇರಿದಂತೆ ಪ್ರಚಲಿತ ವಿಚಾರಗಳು ಪ್ರಜೆಗಳಲ್ಲಿ ನಿರಂತರವಾಗಿ ಚರ್ಚೆಯಾಗಬೇಕು ಎಂಬ ಆಲೋಚನೆ ದೃಷ್ಟಿಯಿಂದ ಆಯೋಜಿಸಲಾಗುವುದು.

- ಜಿ. ಬಿ. ವಿನಯ್ ಕುಮಾರ್

ಪರಿವರ್ತಿಸಬೇಕೆಂಬುದು ನಮ್ಮ ಉದ್ದೇಶ. ಪ್ರಜಾಪ್ರಭುತ್ವದಲ್ಲಿ ಅನಿಸಿಕೆಯನ್ನು ಅಂಜಿಕೆ, ಅಳುಕು ಇಲ್ಲದೇ ವ್ಯಕ್ತಪಡಿಸಬೇಕು. ಕುಟುಂಬ ರಾಜಕಾರಣದ ಬಗ್ಗೆ ರಾಷ್ಟ್ರ, ರಾಜ್ಯ, ಜಿಲ್ಲೆ, ಊರು, ಮನೆ ಮನೆಗಳಲ್ಲಿಯೂ ಚರ್ಚೆಯಾಗಬೇಕು ಎಂದು ಅಭಿಪ್ರಾಯಪಟ್ಟರು.

ಗೆದ್ದವರು ಅವರ ಕುಟುಂಬದ ಏಳಿಗೆ ಅಷ್ಟೇ ಗಮನಕೇಂದ್ರೀಕರಿಸುತ್ತಾರೆ. ಕ್ಷೇತ್ರದ ಅಭಿವೃದ್ಧಿ ಬೇಕಿಲ್ಲ. ನಗರ ಪ್ರದೇಶದವರಿಗಿಂತ ಹಳ್ಳಿಗಳ ಜನರು ಪರಾವಲಂಬಿಗಳಾಗ ಬೇಕು. ಆದ್ರೆ, ದೊಡ್ಡ ಸಮಾವೇಶ ನಡೆಯುವುದು ಕುರ್ಚಿ ಗಟ್ಟಿಮಾಡಲು ಹೊರತು ಶೋಷಿತರ ಅಭಿವೃದ್ಧಿಗಲ್ಲ. ಸಹಿಸಿ ಕೊಂಡು ಹೋಗುತ್ತಿದ್ದೇವೆ. ಇಂದಿನ ಯುವಕರು, ಯುವತಿ ಯರು ಗಟ್ಟಿಯಾಗಿ ಅಭಿಪ್ರಾಯ ವ್ಯಕ್ತಪಡಿಸಬೇಕು. ನಿರ್ಭೀತಿ ಯಿಂದ ನಡೆಯಬೇಕು ಎಂದು ಕಿವಿಮಾತು ಹೇಳಿದರು.

ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಈ ಕಾರ್ಯಕ್ರಮ ಮಾಡಿಲ್ಲ. ನನ್ನ ರೀತಿ 100 ಜನರು ಬೆಳೆಯಬೇಕು. ರಾಜ್ಯ, ಜಿಲ್ಲೆಯಲ್ಲಿ ಈ ರೀತಿ ಬೆಳೆದರೆ ಅಧಿಕಾರ ವಿಕೇಂದ್ರೀಕರಣ ಆಗುತ್ತದೆ. ಒಬ್ಬ ವ್ಯಕ್ತಿ ಮೇಲೆ ವ್ಯವಸ್ಥೆ ಸೃಷ್ಟಿಯಾಗಬಾರದು. ನಾಯಕತ್ವವೂ ಬೇಕು. ಪ್ರಜಾಪ್ರಭುತ್ವ ಆಶಯವೂ ಉಳಿಯಬೇಕು. ಎಲ್ಲರಿಗೂ ಸಮಾನ ಅವಕಾಶ ಸಿಗುವಂ ತಾಗಬೇಕು ಎಂದು ವಿನಯ್ ಕುಮಾರ್ ಎಂದು ಹೇಳಿದರು.

ಯಾವ ಪಕ್ಷದೊಳಗೂ ಪ್ರಜಾಪ್ರಭುತ್ವವೇ ಇಲ್ಲದಂತಾಗಿದೆ. ಚುನಾವಣೆ ಆದ ಮೇಲೆ ನಾನು ವಿಶ್ರಾಂತಿ ಪಡೆಯಬಹುದಿತ್ತು. ಆದ್ರೆ, ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಬೀದರ್, ರಾಯಚೂರು ಸೇರಿದಂತೆ ರಾಜ್ಯದ ಮೂಲೆ ಮೂಲೆಗಳಿಗೆ ಹೋಗಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಪ್ರಜ್ಞೆ ಮೂಡಿಸುತ್ತಿದ್ದೇನೆ. ಜನರು ಕುಟುಂಬ ಆಧಾರಿತ ರಾಜಕೀಯ ಕೈಹಿಡಿಯುತ್ತಾರೆಂದು ಭ್ರಮನಿರಸನಕ್ಕೊಳಗಾಗಿ ಕೂರಲಿಲ್ಲ. ಮುಂಬರುವ ದಿನಗಳಲ್ಲಿ ಯಶಸ್ಸು ಸಿಗುತ್ತದೆ ಎಂಬ ವಿಶ್ವಾಸ ಇದೆ ಎಂದರು.

ವೇದಿಕೆಯಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್, ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್, ವಕೀಲರಾದ ಸಿ. ಪಿ. ಅನಿತಾ, ಚಿತ್ರನಿರ್ದೇಶಕರು, ಉಪನ್ಯಾಸಕ ಮಾರುತಿ ಶಾಲೆಮನೆ ಮಾತನಾಡಿದರು.

ಎಸ್.ಎಂ. ಕೃಷ್ಣ ಕಾಲೇಜಿನ ಉಪನ್ಯಾಸಕ ರಾದ ಧನಂಜಯ, ಗುರುದೇವ ಬಳುಂಡಗಿ, ರಾಜು ಮೌರ್ಯ, ವಿರೂಪಾಕ್ಷಪ್ಪ ಪಂಡಿತ್, ಶಿವಕುಮಾರ್ ಶೆಟ್ಟರ್, ಪುರಂದರ ಲೋಕಿಕೆರೆ, ಅಯ್ಯಣ್ಣ ಹುಲಿಕಲ್, ಶಿವಕುಮಾರ್ ಸಂಬಳಿ, ಸಾಧಿಕ್, ಹೊನ್ನಾಳಿಯ ರಾಜು ಕಣಗಣ್ಣನವರ್, ಮತ್ತಿತರರು ಉಪಸ್ಥಿತರಿದ್ದರು.

# ಸೈಬರ್ ವಂಚನೆಯಾದರೆ ಶೀಘ್ರ ದೂರು ನೀಡಿ




ದಾವಣಗೆರೆ, ಫೆ.16- ಪೆಟ್ರೋಲ್, ಡೀಸೆಲ್ ರೀತಿಯೇ ಸಾರ್ವಜನಿಕರ ವೈಯಕ್ತಿಕ ಡೇಟಾ ಮಾರಾಟವಾಗುತ್ತಿವೆ. ಇದರಿಂದ ಸೈಬರ್ ವಂಚನೆಗಳು ಹೆಚ್ಚಾಗುತ್ತಿದ್ದು, ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಸೈಬರ್ ಭದ್ರತೆ ಮತ್ತು ನಿರ್ವಹಣಾ ಸಲಹೆಗಾರ ಯಶವಂತ್ ಎ.ಎಸ್. ಹೇಳಿದರು.

ವರ್ತಮಾನ ಫೋರಂ ಫಾರ್ ಇಂಟಲೆಕ್ಚುಯಲ್ ಡಿಬೆಟ್ಸ್ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಸೈಬರ್ ವಂಚನೆ-ಒಳ ಸುಳಿವು ವಿಷಯ ಕುರಿತು ಅವರು ಮಾತನಾಡಿದರು.

ಸೈಬರ್ ವಂಚನೆಗೆ ತುತ್ತಾದರೆ ಕೂಡಲೇ 1930ಕ್ಕೆ ಕರೆ ಮಾಡಬೇಕು. ಅವರು ಕೇಳುವ ಮಾಹಿತಿ ನೀಡಬೇಕು. ವಂಚನೆಗೆ ತುತ್ತಾದ ನಂತರದ ಒಂದು ಗಂಟೆಯನ್ನು 'ಗೋಲ್ಡನ್ ಅವರ್' ಎನ್ನಲಾಗುತ್ತದೆ. ಈ ಸಮಯ ನಿಮ್ಮ ವಂಚನೆ ಪ್ರಮಾಣ ಕಡಿಮೆ ಮಾಡುತ್ತದೆ ಎಂದು ಹೇಳಿದರು.

ಟೆಲಿಗ್ರಾಂ ಆಪ್ ಮೂಲಕ ಹೆಚ್ಚು ಮೋಸ ನಡೆಯುತ್ತಿದೆ. ವಿದ್ಯಾರ್ಥಿಗಳು ನೋಟ್ಸ್ ನೋಡು ವುದು, ಪೈರಸಿ ಸಿನಿಮಾಗಳನ್ನು ನೋಡುವುದು ಇದರಲ್ಲಿಯೇ ಹೆಚ್ಚು. ಕೂಡಲೇ ಟೆಲಿಗ್ರಾಂ ಆಪ್ ಬಳಕೆ ಕೈ ಬಿಡುವುದು ಉತ್ತಮ ಎಂದು ಹೇಳಿದರು.

ಜಗತ್ತಿನಲ್ಲಿ ಮೋಸ ಹೋಗುತ್ತಿರುವ ಪಟ್ಟಿಯಲ್ಲಿ ಭಾರತ 10ನೇ ಸ್ಥಾನದಲ್ಲಿದೆ. ದೇಶದ ಭರತ್ ಪುರ ಎಂಬಲ್ಲಿಯೇ ಶೇ.18ರಷ್ಟು ಸೈಬರ್ ಕ್ರೈಂಗಳು ನಡೆಯುತ್ತಿವೆ. ಇವುಗಳ ಮೂಲ ಹುಡುಕು ವುದು ಪೊಲೀಸರಿಗೆ ಕಷ್ಟವಾಗುತ್ತಿದೆ ಎಂದರು.

ಇ-ಮೇಲ್ ಪಾಸ್‌ವರ್ಡ್ 8 ಅಕ್ಷರಗಳಿಂತ ಕಡಿಮೆ ಇದ್ದರೆ ಕೇವಲ 15 ನಿಮಿಷಗಳಲ್ಲಿ ಅದನ್ನು ಹ್ಯಾಕ್ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕನಿಷ್ಟ 14 ಅಕ್ಷರದ ಕಠಿಣ ಪಾಸ್‌ವರ್ಡ್ ಇಟ್ಟುಕೊಳ್ಳಬೇಕು. ತಿಂಗಳಿಗೊಮ್ಮೆ ಪಾಸ್‌ವರ್ಡ್ ಬದಲಾಯಿಸುತ್ತಿರಬೇಕು ಎಂದು ಹೇಳಿದರು.

ನಿಮ್ಮ ಹೆಸರಿನಲ್ಲಿ ಮಾದಕ ವಸ್ತುಗಳ ಪಾರ್ಸಲ್ ಬಂದಿದೆ ಎಂದೂ, ಅಥವಾ ನಿಮ್ಮ ಕುಟುಂಬ ಸದಸ್ಯರನ್ನು ಬಂಧಿಸಲಾಗಿದೆ ಎಂಬ ಕಾರಣದಿಂದ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡುವುದಾಗಿ ವಂಚಕರು ಹೇಳುತ್ತಾರೆ. ಈ ವೇಳೆ ಗಾಬರಿಯಾಗಿ ಸ್ಪಂದಿಸಬಾರದು. ಯಾವ ಠಾಣೆಯಲ್ಲಿ ಬಂಧಿಸಲಾಗಿದೆ ಎಂಬ ಮಾಹಿತಿ ಕೇಳಿ, ಪೊಲೀಸ್ ಠಾಣೆಗೆ ತಾವೇ ಬರುವುದಾಗಿ ಹೇಳಬೇಕು ಎಂದು ಸಲಹೆ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್ ಚಾರ್ಜ್ ಮಾಡುವಾಗಲೂ ವಂಚನೆಗೆ ಒಳಗಾಗಿರುವ ಉದಾಹರಣೆಗಳಿವೆ. ಈ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ಚಾರ್ಜ್ ಮಾಡುವುದು ಕೈ ಬಿಡಿ. ಪವರ್ ಬ್ಯಾಂಕ್ ಬಳಸಿ, ಅವುಗಳನ್ನೇ ಚಾರ್ಜ್ ಮಾಡಿ. ಚಾರ್ಜಿಂಗ್ ಅನಿವಾರ್ಯವಾದರೆ ಮೊಬೈಲ್ ಸ್ವಿಚ್ ಆಫ್ ಮಾಡಿ ಚಾರ್ಜ್ ಮಾಡುವಂತೆ ಕಿವಿ ಮಾತು ಹೇಳಿದರು.

ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ನಲ್ಲಿ ವೈಫೈ ಮೋಡ್ ಆಫ್ ಮಾಡುವುದು ಅಗತ್ಯ ಇಲ್ಲದಿದ್ದರೆ 10 ಅಡಿ ದೂರದಿಂದಲೇ ನಿಮ್ಮ ಖಾತೆಯಲ್ಲಿನ ಹಣ ತೆಗೆಯುವ ಸಾಧ್ಯತೆ ಇರುತ್ತದೆ. ಬ್ಯಾಂಕ್‌ನ ಅಧಿಕೃತ ಆಪ್ ಮೂಲಕ ವೈಫೈ ಮೋಡ್ ಆಫ್ ಮಾಡುವಂತೆ ಹೇಳಿದರು.

ಏರ್‌ಪೋರ್ಟ್‌ಗಳಲ್ಲಿ ಲಗೇಜ್ ಬ್ಯಾಗ್‌ಗಳಿಗೆ ಹಾಕುವ ಟ್ಯಾಗ್‌ನಲ್ಲಿ ನಿಮ್ಮ ಸಂಪೂರ್ಣ ಮಾಹಿತಿ ಇರುತ್ತದೆ. ಆದ್ದರಿಂದ ಏರ್‌ಪೋರ್ಟ್‌ನಿಂದ ಹೊರ ಬಂದ ಕೂಡಲೇ ಅದನ್ನು ತೆಗೆದು ಬ್ಯಾಗ್ ಒಳಗೆ ಹಾಕಿಕೊಳ್ಳಿ ಎಂದು ಹೇಳಿದರು.

ಮೊಬೈಲ್‌ಗಳಲ್ಲಿ ಬರುವ .APK, .EVE ಫೈಲ್‌ಗಳನ್ನು ತೆರೆಯಬಾರದು. ಯಾರೇ ಮೊಬೈಲ್ ಗಿಫ್ಟ್ ಕೊಟ್ಟರೂ ಎಚ್ಚರಿಕೆಯಿಂದ ಇರಬೇಕು ಎಂದರು.

ವರ್ತಮಾನ ಸದಸ್ಯ ಹೆಚ್.ಎಲ್. ಶ್ರೀನಿವಾಸ ಮೂರ್ತಿ, ಸೈಬರ್ ಕ್ರೈಂ ವಿಭಾಗದ ಪೊಲೀಸ್ ಅಧಿಕಾರಿ ಸುನಿಲ್ ತೇಲಿ ಉಪಸ್ಥಿತರಿದ್ದರು. ಉಪನ್ಯಾಸಕ ಶ್ರೀಧರ್ ಹೆಚ್.ಎಂ. ಪ್ರಾರ್ಥಿಸಿದರು. ಕೆ.ಎಂ. ಮೇಘರಾಜ್ ಸ್ವಾಗತಿಸಿದರು. ಪ್ರಸಾದ್ ಬಂಗೇರ ಎಸ್. ನಿರೂಪಿಸಿದರು. ಗಂಗಾಧರ್ ವಂದಿಸಿದರು.

**ಸೈಬರ್ ಭದ್ರತೆ ಮತ್ತು ನಿರ್ವಹಣಾ ಸಲಹೆಗಾರ ಯಶವಂತ್ ಎ.ಎಸ್**

### ಈಡಿಯಟ್ ಸಿಂಡ್ರೋಮ್

ಮೊಬೈಲ್ ಬಿಟ್ಟಿರಲಾಗದ ಸ್ಥಿತಿಯನ್ನು ಮಾನಸಿಕ ತಜ್ಞರು ನೋಮೋಫೋಬಿಯಾ ಎಂದು ಕರೆಯುತ್ತಾರೆ. ಅದರ ಮುಂದುವರಿದ ಭಾಗವನ್ನು IDIOT ಸಿಂಡ್ರೋಮ್ ಎನ್ನಲಾಗುತ್ತದೆ. ಇದಕ್ಕೆ ತುತ್ತಾದವರು ಯಾವುದೇ ಮಾಹಿತಿ ಬೇಕಾದರೂ ಗೂಗಲ್‌ನಲ್ಲಿ ಹುಡುಕಲಾರಂಭಿಸುತ್ತಾರೆ. ಇವರೇ ಹೆಚ್ಚು ಮೋಸ ಹೋಗುವ ಸಾಧ್ಯತೆ ಇದೆ ಎಂದು ಯಶವಂತ್ ಎ.ಎಸ್. ಹೇಳಿದರು.

## ಅರ್ಬನ್ ಬ್ಯಾಂಕ್‌ನ ನಿಟುವಳ್ಳಿ ಶಾಖೆ ಸಾರ್ವಜನಿಕರ ಸೇವೆಗೆ ಸಮರ್ಪಣೆ



(6ನೇ ಪುಟದಿಂದ) ಠೇವಣಿದಾರರ ಪ್ರೋತ್ಸಾಹ, ಸಿಬ್ಬಂದಿ ವರ್ಗದವರ ಶ್ರಮ ಮತ್ತು ಆಡಳಿತ ಮಂಡಳಿಯ ಇಚ್ಛಾಶಕ್ತಿಯಿಂದ ಬ್ಯಾಂಕ್ ಪ್ರಗತಿ ಹೊಂದಲು ಕಾರಣ ಎಂದು ಪ್ರತಿಯೊಬ್ಬರ ಸೇವೆಯನ್ನು ಸ್ಮರಿಸಿ ಧನ್ಯವಾದ ಹೇಳಿದರು.

ಬ್ಯಾಂಕಿನ ನಿರ್ದೇಶಕರುಗಳಾದ ಅಂದನೂರು ಮುಪ್ಪಣ್ಣ, ಪಲ್ಲಾಗಟ್ಟಿ ಶಿವಾನಂದಪ್ಪ, ಎಂ. ಚಂದ್ರಶೇಖರ್, ದೇವರಮನೆ ಶಿವಕುಮಾರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಕಂಚಿಕೇರಿ ಮಹೇಶ್, ವಿ. ವಿಕ್ರಮ್, ಶ್ರೀಮತಿ ಎ.ಆರ್. ಅರ್ಚನಾ ಡಾ. ರುದ್ರಮುನಿ, ಹೆಚ್.ಎಂ. ರುದ್ರಮುನಿಸ್ವಾಮಿ, ಸೋಗಿ ಮುರುಗೇಶ್, ವೃತ್ತಿಪರ ನಿರ್ದೇಶಕ ಮುಂಡಾಸ್ ವೀರೇಂದ್ರ ಅವರುಗಳು ಅತಿಥಿ ಗಣ್ಯರನ್ನು ಬರಮಾಡಿಕೊಂಡು ಸನ್ಮಾನಿಸಿ, ಗೌರವಿಸಿದರು.

ಹಿರಿಯ ನ್ಯಾಯವಾದಿಯೂ ಆಗಿರುವ ಬ್ಯಾಂಕಿನ ವೃತ್ತಿಪರ ನಿರ್ದೇಶಕ ಮಲ್ಲಿಕಾರ್ಜುನ ಕಣವಿ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ, ಬ್ಯಾಂಕಿನ ಪ್ರಗತಿಯ ಪಕ್ಷಿನೋಟವನ್ನು ಸಭಿಕರ ಮುಂದಿಟ್ಟರು.

ಇದೇ ಸಂದರ್ಭದಲ್ಲಿ ಬ್ಯಾಂಕಿನ ನಿಟುವಳ್ಳಿ ಶಾಖೆಗೆ ನಿವೇಶನ ನೀಡಿದ ಹಿರಿಯ ವರ್ತಕ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ನೂತನ ಕಟ್ಟಡದ ಅಭಿಯಂತರ ಟಿ.ಸಿ. ವಿನಾಯಕ, ವಾಸ್ತುಶಿಲ್ಪಿ ಐ.ಆರ್. ಸುಮ ಸೇರಿದಂತೆ ಗಣ್ಯರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು.

ಬ್ಯಾಂಕಿನ ಸದಸ್ಯರು, ಠೇವಣಿದಾರರು, ಗಣ್ಯರು ಮಾತನಾಡಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸೇವೆ ಮತ್ತು ಪ್ರಗತಿಯನ್ನು ಕೊಂಡಾಡಿದರು. ಶ್ರೀಮತಿ ಎಂ. ಅನುಶ್ರೀ ಮತ್ತು ಶ್ರೀಮತಿ ಎ.ಎಂ. ತೇಜಸ್ವಿನಿ ಅವರುಗಳು ಪ್ರಾರ್ಥನೆ ಸಲ್ಲಿಸಿದರು. ಹಿರಿಯ ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯಕುಮಾರ್ ವಂದಿಸಿದರು. ನಿರ್ದೇಶಕ ಇ.ಎಂ. ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕ ಆರ್.ಎ. ಪ್ರಸನ್ನ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಬ್ಯಾಂಕಿನ ವ್ಯವಸ್ಥಾಪಕರುಗಳಾದ ಪ್ರಧಾನ ಕಛೇರಿಯ ಹೆಚ್.ವಿ. ರುದ್ರೇಶ್, ಚೌಕಿಪೇಟೆಯ ಜಿ.ಕೆ. ವಿಜಯಕುಮಾರ್, ನರಸರಾಜ ರಸ್ತೆಯ ರವಿಶಂಕರ್, ಪಿ.ಜೆ. ಬಡಾವಣೆಯ ಸಾನಂದ ಗಣೇಶ್, ದೇವರಾಜ ಅರಸು ಬಡಾವಣೆಯ ಕೆ.ಎಸ್. ಮಹೇಶ್, ಹೊನ್ನಾಳಿಯ ಹೆಚ್. ಕುಮಾರ್, ನಿಟುವಳ್ಳಿಯ ಎನ್.ಕೆ. ಯೋಗೇಶ್, ಆಡಳಿತ ಕಛೇರಿ ಡಿಬಿಎ ಬಿ.ಎಸ್. ಪ್ರಶಾಂತ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

# ಅನುದಾನಿತ ನೌಕರರ ಬೇಡಿಕೆಗಳು ಶೀಘ್ರ ಇತ್ಯರ್ಥ : ಉಪಸಭಾಪತಿ ರುದ್ರಪ್ಪ ಲಮಾಣಿ



ರಾಣೇಬೆನ್ನೂರು, ಫೆ. 16 - ಶೀಘ್ರದಲ್ಲಿ ಸಚಿವ ಮಧು ಬಂಗಾರಪ್ಪ, ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಅನುದಾನಿತ ಕಾಲೇಜು ನೌಕರರ ಸಂಘದ ಪ್ರತಿನಿಧಿಗಳ ಸಭೆ ನಡೆಸಿ ನೌಕರರ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಕೊಂಡು, ಅವರ ಬೇಡಿಕೆಗಳ ಇತ್ಯರ್ಥಕ್ಕೆ ಸೂಕ್ತ ಕ್ರಮ ಜರುಗಿಸುವುದಾಗಿ ವಿಧಾನ ಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು.

ಅನುದಾನಿತ ಪದವಿ ಪೂರ್ವ ಕಾಲೇಜು ನೌಕರರ ಹಾವೇರಿ ಜಿಲ್ಲಾ ಘಟಕ ಉದ್ಘಾಟಿಸಿ, ಅವರ ಬೇಡಿಕೆಗಳ ಮನವಿ ಪತ್ರ ಸ್ವೀಕರಿಸಿ ಅವರು ಮಾತನಾಡಿದರು.

ನಾನು ಸಹ ಸಂಸ್ಥೆಯಿಂದ ವಿದ್ಯಾಲಯಗಳನ್ನು ನಡೆಸುತ್ತಿದ್ದೇನೆ. ವಿಶೇಷ ತರಗತಿಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪ್ರಾಚಾರ್ಯರು, ಶಿಕ್ಷಕರು ಹಾಗೂ ಆಡಳಿತ ಮಂಡಳಿ ಶ್ರಮಿಸಿದರೆ, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ ಎನ್ನುವುದು ನನಗೆ ಗೊತ್ತಿದೆ, ಆದರೆ 'ಸಂತೆ ಮಾಡಲು ರೊಕ್ಕ ಸಿಕ್ಕರೆ ಸಾಕು' ಎನ್ನುವ ಆಡಳಿತದಿಂದ ಕ್ವಾಲಿಟಿ, ಕ್ವಾಂಟಿಟಿ ಎರಡೂ ಸಿಗಲಾರದು ಎಂದು ಬಿಎಜೆಎಸ್‌ಎಸ್ ಸಂಸ್ಥೆಯ ಚೇರ್ಮನ್ ರೂ ಆದ ಉಪಸಭಾಪತಿ ರುದ್ರಪ್ಪ ಲಮಾಣಿ ವಿಷಾದ ವ್ಯಕ್ತಪಡಿಸಿದರು.

ವಿದ್ಯಾರ್ಥಿಯ ಭವಿಷ್ಯವನ್ನು ರೂಪಿಸುವ ಈ ಪದವಿ ಪೂರ್ವ ಹಂತದ ಶಿಕ್ಷಣದಿಂದ ದೇಶದ ಅಭಿವೃದ್ಧಿ ಸಾಧ್ಯವಾಗಲಿದೆ. ಕಾರಣ ಅವರ ಉತ್ತಮ ಭವಿಷ್ಯ ರೂಪಿಸಲು ಗುಣಮಟ್ಟದ ಶಿಕ್ಷಣ ಕೊಡುವಂತೆ ಹಾಗೂ ಜನಸಂಖ್ಯೆಯ ಅರ್ಧದಷ್ಟು ಅಂದರೆ 70 ಕೋಟಿಯಷ್ಟು ಇರುವ ಮಹಿಳೆಯರೂ ಸಹ ಉತ್ತಮ ಶಿಕ್ಷಣ ಪಡೆದು, ಅಭಿವೃದ್ಧಿಯಲ್ಲಿ ಪಾಲುದಾರರು ಆಗಬೇಕು ಎಂದು ಅತಿಥಿಯಾಗಿ ಪಾಲ್ಗೊಂಡಿದ್ದ ಶಾಸಕ ಪ್ರಕಾಶ ಕೋಳಿವಾಡ ಮನವಿ ಮಾಡಿದರು.

ಸಂಸ್ಥೆಯ ಆಡಳಿತಾಧಿಕಾರಿ ಆರ್.ಎಂ. ಕುಬೇರಪ್ಪ, ರಾಜ್ಯ ಸಂಘದ ಅಧ್ಯಕ್ಷ ಡಾ. ಹರೀಶ್, ಸಿಂಡಿಕೇಟ್ ಸದಸ್ಯ ರಮೇಶ್ ಲಮಾಣಿ, ಎನ್‌ಎಸ್‌ಎಸ್ ಅಧಿಕಾರಿ ರವಿಕುಮಾರ್ ಅಂಬೋರೆ, ಪ್ರಾಚಾರ್ಯರ ಸಂಘದ ಜಿಲ್ಲಾಧ್ಯಕ್ಷ ನಾಗರಾಜ ದ್ಯಾಮನ ಕೊಪ್ಪ ಮತ್ತಿತರರಿದ್ದರು. ಜಿಲ್ಲಾಧ್ಯಕ್ಷ ಪರಶುರಾಮ ಗಚ್ಚಿನಮನಿ ಅಧ್ಯಕ್ಷತೆ ವಹಿಸಿದ್ದರು.

## ಅಕ್ರಮ ಮರಳು ಸಾಗಾಣಿಕೆ ಸಂಬಂಧ ಸಹಾಯವಾಣಿ ಕೇಂದ್ರ

ದಾವಣಗೆರೆ, ಫೆ.16- ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ತಾಲ್ಲೂಕಿನ ವಿವಿಧ ಇಲಾಖೆಗಳನ್ನು ಒಳಗೊಂಡಂತೆ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ತಂಡವನ್ನು ರಚಿಸಿ, ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಹಗಲು ಮತ್ತು ರಾತ್ರಿ ಪಾಳೆಯದಲ್ಲಿ ಕರ್ತವ್ಯ ನಿರ್ವಹಿಸುವರು. ಸಾರ್ವಜನಿಕರಿಂದ ಮಾಹಿತಿ ಪಡೆಯಲು ಸಹಾಯವಾಣಿ ಕೇಂದ್ರ ತೆರೆಯಲಾಗಿದೆ.

ಅಕ್ರಮ ಮರಳು ಸಾಗಾಣಿಕೆ ಸಂಬಂಧ ಸಾರ್ವಜನಿಕರು ಯಾವುದೇ ದೂರುಗಳು ಅಥವಾ ಮಾಹಿತಿಯನ್ನು ದೂ.ಸಂ 08192-240751 ಸಹಾಯವಾಣಿಗೆ ದಿನ 24 ಗಂಟೆ ಅವಧಿಯಲ್ಲಿ ಕರೆ ಮಾಡಬಹುದಾಗಿದೆ ಎಂದು ಹರಿಹರ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.



## ಕದರಮಂಡಲಗಿಯಲ್ಲಿ ಇಂದು ಮಹಾ ರಥೋತ್ಸವ

ಬ್ಯಾಡಗಿ ತಾಲ್ಲೂಕು ಮಹಾಕ್ಷೇತ್ರ ಕದರಮಂಡಲಗಿಯಲ್ಲಿ ಶ್ರೀ ಆಂಜನೇಯ (ಕಾಂತೇಶ) ಸ್ವಾಮಿ ಮಹಾ ರಥೋತ್ಸವವು ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ. ನಂತರ ಓಕಳಿ ಕಾರ್ಯಕ್ರಮವಿದೆ.



## ದೇವರಬೆಳಕೆರೆಯಲ್ಲಿ ಇಂದು ಮೈಲಾರ ಲಿಂಗೇಶ್ವರ ರಥೋತ್ಸವ

ದೇವರಬೆಳಕೆರೆ ಗ್ರಾಮದ ಆರಾಧ್ಯ ದೈವ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ರಥೋತ್ಸವವು ಇಂದು ಸಂಜೆ 4.30ಕ್ಕೆ ಜರುಗಲಿದೆ. ನಾಳೆ ಮಂಗಳವಾರ ಸಂಜೆ 4 ಗಂಟೆಗೆ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ನಡೆಯಲಿವೆ. ಅದೇ ದಿನ ಸಂಜೆ ಓಕುಳಿಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

## ಹತ್ಯೆ ಪ್ರಕರಣ : ಅಮೆರಿಕಾದಿಂದ ಹಸ್ತಾಂತರಗೊಂಡ ಇಬ್ಬರ ಬಂಧನ

ಪಟಿಯಾಲ, ಫೆ. 16 - ಅಮೆರಿಕದಿಂದ ಹಸ್ತಾಂತರಗೊಂಡ ಇಬ್ಬರು ಕೊಲೆ ಪ್ರಕರಣದಲ್ಲಿ ಸಿಲುಕಿದ್ದ ಹಿನ್ನೆಲೆಯಲ್ಲಿ, ಶನಿವಾರ ರಾತ್ರಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ತಕ್ಷಣವೇ ಬಂಧಿಸಲಾಗಿದೆ.

ಪಂಜಾಬ್‌ನ ಪಟಿಯಾಲ ಜಿಲ್ಲೆಯ ರಾಜಪುರಕ್ಕೆ ಸೇರಿದ ಸಂದೀಪ್ ಸಿಂಗ್ ಹಾಗೂ ಪ್ರದೀಪ್ ಸಿಂಗ್ ವಿರುದ್ಧ 2023ರಲ್ಲಿ ಹತ್ಯೆ ಪ್ರಕರಣ ದಾಖಲಿಸಲಾಗಿತ್ತು. ಈ ಇಬ್ಬರು ಸೇರಿದಂತೆ 116 ಜನರನ್ನು ಅಕ್ರಮ ವಲಸೆ ಹಿನ್ನೆಲೆಯಲ್ಲಿ ಅಮೆರಿಕದಿಂದ ಹಸ್ತಾಂತರಿಸಲಾಗಿತ್ತು. ಇವರನ್ನು ಒಳಗೊಂಡ ವಿಮಾನ ಶನಿವಾರ ಅಮೃತ್‌ಸರ್ ವಿಮಾನ ನಿಲ್ದಾಣಕ್ಕೆ ಬಂದಿಳಿದಿತ್ತು.

## ನಗರಕ್ಕೆ ನಾಳೆ ಇಂಧನ ಸಚಿವ ಜಾರ್ಜ್

ದಾವಣಗೆರೆ, ಫೆ.16- ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಅವರು ನಾಡಿದ್ದು ದಿನಾಂಕ 18ರ ಮಂಗಳವಾರ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ದಿನಾಂಕ 18ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡುವರು. ನಂತರ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿರುವ ಇಂಧನ ಇಲಾಖೆಯ ವಿಷಯಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಚುನಾಯಿತ ಜನ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವರು.

## ಪಿಜಿ ಪರೀಕ್ಷಾ ಶುಲ್ಕ ಹೆಚ್ಚಳ : ಎಐಡಿಎಸ್‌ಓ ಖಂಡನೆ

ದಾವಣಗೆರೆ, ಫೆ.16- ದಾವಣಗೆರೆ ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿಗಳ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಿರುವುದನ್ನು ಎಐಡಿಎಸ್‌ಓ ಖಂಡಿಸಿದೆ.

ಈ ಹಿಂದೆ ಪರೀಕ್ಷಾ ಶುಲ್ಕವು 1,980 ರೂ. ಇತ್ತು, ಈ ಶುಲ್ಕವು ಪದವಿ ಪರೀಕ್ಷಾ ಶುಲ್ಕದ ಎರಡರಷ್ಟಿದ್ದು, ಪ್ರಸಕ್ತ ಸ್ನಾತಕೋತ್ತರ ಪರೀಕ್ಷೆಯ ಶುಲ್ಕವನ್ನು ಮತ್ತೆ 90 ರೂ ಏರಿಕೆ ಮಾಡಲಾಗಿದೆ. ಈ ಏರಿಕೆಯು ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ತುಂಬಾ ಹೊರೆ ಯಾಗುತ್ತದೆ. ಹಾಗಾಗಿ ಕೂಡಲೇ ಶುಲ್ಕ ಕಡಿತಗೊಳಿಸ ಬೇಕೆಂದು ಆಗ್ರಹಿಸುವುದಾಗಿ ಎಐಡಿಎಸ್‌ಓ ಜಿಲ್ಲಾ ಕಾರ್ಯ ದರ್ಶಿ ಟಿ. ಎಸ್. ಸುಮನ್ ತಿಳಿಸಿದ್ದಾರೆ.

# ಮನೆ ಕಳವು ಮಾಡುತ್ತಿದ್ದ ಇಬ್ಬರು ಆರೋಪಿತರ ಬಂಧನ




ಹರಿಹರ, ಫೆ. 16 - ನಗರದ ಹೊರವಲಯದ ಬನ್ನಿಕೋಡು ಗ್ರಾಮದ ಶಶಿಕಲಾ ರಮೇಶ್ ಎಂಬುವವರ ಮನೆಯಲ್ಲಿನ ಹಣಕಾಸಿನ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಪೂಜೆ ಮಾಡುತ್ತೇವೆ ಎಂದು ಹೇಳಿಕೊಂಡು ದಿನಾಂಕ 11 ರಂದು ಇಸ್ಮಾಯಿಲ್, ಜಬೀವುಲ್ಲಾ, ಹಾಗೂ ರುಕ್ಸಾನ ಬೇಗಂ ಎಂಬುವವರು ಮನೆಯಲ್ಲಿ ಇದ್ದವರನ್ನು ನಂಬಿಸಿ 1.44 ಲಕ್ಷ ರೂ. ವೆಚ್ಚದ 2 ತೊಲ ಬಂಗಾರದ ಆಭರಣಗಳನ್ನು ದೋಚಿಕೊಂಡು ಹೋಗಿದ್ದಾರೆ.

ಬನ್ನಿಕೋಡು ಗ್ರಾಮದ ಶಶಿಕಲಾ ರಮೇಶ್ ಅವರು ಗ್ರಾಮಾಂತರ ಗುತ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ ಪರಿಣಾಮ ಸಿಬ್ಬಂದಿಗಳನ್ನೊಳಗೊಳಗೊಂಡ ತಂಡವು ಪತ್ತೆ ಕಾರ್ಯಾಚರಣೆ ನಡೆಸಿ ಆರೋಪಿತರಾದ ದಾವಣಗೆರೆ ಭಾಷಾನಗರ ನಿವಾಸಿ ಎಲೆಕ್ಟ್ರೀಷಿಯನ್ ಇಸ್ಮಾಯಿಲ್, ಜಬೀವುಲ್ಲಾ, ಭಗತ್ ಸಿಂಗ್ ಪುರ ಓಡಿಸ್ಸಾ ಟೈಲರ್ ರುಕ್ಸಾನ ಬೇಗಂ ಕೋಂ ಜಲಾಲುದ್ದೀನ್ ಅವರನ್ನು ಬಂಧಿಸಿದ್ದಾರೆ. ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ 2 ಪ್ರಕರಣಗಳು ಮತ್ತು ಆಜಾದ್ ನಗರ ಠಾಣೆಯ 1 ಪ್ರಕರಣ ಪತ್ತೆಯಾಗಿದ್ದು, ಬಂಧಿತರಿಂದ 8,65,000 ಸಾವಿರ ರೂ. ಮೌಲ್ಯದ 90 ಗ್ರಾಂ ತೂಕದ ಬಂಗಾರದ ಆಭರಣಗಳು ಹಾಗೂ 750 ಗ್ರಾಂ ತೂಕದ ಬೆಳ್ಳಿಯ ಸಾಮಾನುಗಳನ್ನು ವಶಪಡಿಸಿಕೊಂಡಿದ್ದು ಆರೋಪಿತರನ್ನು ಬಂಧಿಸಿದ್ದಾರೆ.

ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್. ಬಸವರಾಜ್ ವೃತ್ತ ನಿರೀಕ್ಷಕ ಸುರೇಶ ಸಗರಿ, ಗುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಎಸ್. ಕುಪ್ಪೇಲೂರು, ಪಿಎಸ್‌ಐ ಮಹದೇವ ಸಿದ್ದಪ್ಪ ಭತ್ತೆ, ಸಿಬ್ಬಂದಿಗಳಾದ ತಿಪ್ಪೇಸ್ವಾಮಿ, ಜಿ.ಎನ್. ರಮೇಶ, ನೀಲಮೂರ್ತಿ, ದಾದಾಪೀರ್, ಅನಿಲ್ ಕುಮಾರ್, ಬಸವನಗೌಡ, ಲಿಂಗರಾಜ್, ಕರಿಯಪ್ಪ, ಸತೀಶ್ ಟಿ.ವಿ, ರಿಜ್ವಾನ್ ನಾಸೂರ್, ಗಂಗಾಧರ, ಸುರೇಶ ಉಪ್ಪಾರ, ಪ್ರಸನ್ನಕಾಂತ, ಅನಿಲ್ ಕುಮಾರ್ ನಾಯ್ಕ್, ಕಡೇಮನಿ ನಾಗಪ್ಪ, ಅರ್ಜುನ್ ನಂದ್ಯಾಲ, ಶ್ರೀಮತಿ ಸಿ.ಎಂ. ಸುಶೀಲ, ನಾಜೀಮಾ, ಪವಿತ್ರ, ಸಿದ್ದಪ್ಪ ಅವರನ್ನೊಳಗೊಂಡ ತಂಡವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಶ್ಲಾಘಿಸಿದ್ದಾರೆ.

# ದಾವಣಗೆರೆ ಅರ್ಬನ್ ಬ್ಯಾಂಕ್ ನಿಟುವಳ್ಳಿ ಶಾಖೆ ಸಾರ್ವಜನಿಕರ ಸೇವೆಗೆ ಸಮರ್ಪಣೆ

ದಾವಣಗೆರೆ, ಫೆ. 16 - ತನ್ನ ಪ್ರಧಾನ ಕಛೇರಿಯೂ ಸೇರಿದಂತೆ 7 ಶಾಖೆಗಳನ್ನು ಹೊಂದಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ ಗ್ರಾಹಕರ ಬಹುದಿನಗಳ ಬೇಡಿಕೆಯಾಗಿದ್ದ ನಿಟುವಳ್ಳಿ ಶಾಖೆಯನ್ನು ಇದೀಗ ಸಾರ್ವಜನಿಕರ ಸೇವೆಗೆ ಸಮರ್ಪಿಸಿದೆ.

ನಿಟುವಳ್ಳಿಯ ಹೆಚ್‌ಕೆಆರ್ ಸರ್ಕಲ್ ಹತ್ತಿರದ ಸಿದ್ಧರಾಮೇಶ್ವರ ಬಡಾವಣೆಯ 1ನೇ ಮುಖ್ಯರಸ್ತೆ 1ನೇ ತಿರುವಿನಲ್ಲಿ ಈ ಶಾಖೆಯನ್ನು ಸ್ಥಾಪಿಸಲಾಗಿದ್ದು, ಮೊನ್ನೆ ನಡೆದ ಸರಳ ಸಮಾರಂಭದಲ್ಲಿ ನಾಗರಿಕರ ಶುಭ ಹಾರೈಕೆಗಳೊಂದಿಗೆ ನೂತನ ಶಾಖೆಯನ್ನು ಆರಂಭಿಸಲಾಯಿತು.

**ಶಾಖೆ ಉದ್ಘಾಟನೆ**

ಮಾಜಿ ಸಚಿವರೂ ಆದ ಹಿರಿಯ ಮುತ್ಸದ್ಧಿ ಎಸ್.ಎ. ರವೀಂದ್ರನಾಥ್ ಅವರು, ಸಮಾರಂಭದಲ್ಲಿ ಉಪಸ್ಥಿತರಿದ್ದ ಅತಿಥಿ ಗಣ್ಯರು, ಸದಸ್ಯರು, ಗ್ರಾಹಕರು, ಠೇವಣಿದಾರರು, ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರ ಚಪ್ಪಾಳೆಗಳ ಮಧ್ಯೆ ಟೇಪು ಕತ್ತರಿಸುವುದರ ಮೂಲಕ ನೂತನ ಶಾಖೆಯನ್ನು ನಾಗರಿಕರ ಸೇವೆಗೆ ಅರ್ಪಿಸಿದರು.

ಈ ಸಂದರ್ಭದಲ್ಲಿ ಆಶಯ ನುಡಿಗಳನ್ನಾಡಿದ ಎಸ್.ಎ. ರವೀಂದ್ರನಾಥ್, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಮತ್ತು ತಮ್ಮ ನಡುವಿನ ಬ್ಯಾಂಕ್ ವ್ಯವಹಾರ, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರೊಂದಿಗಿನ ಅವಿನಾಭಾವ ಸಂಬಂಧವನ್ನು ಮೆಲುಕು ಹಾಕಿ ಈ ಬ್ಯಾಂಕಿನ ಸೇವೆ ಇನ್ನೂ



ಸಾವಿರಾರು ಜನಕ್ಕೆ ಸಿಗುವಂತಾಗಲಿ ಎಂದು ಹಾರೈಸಿದರು.

**ಭದ್ರತಾ ಕೊಠಡಿ ಉದ್ಘಾಟನೆ**

ಭದ್ರತಾ ಕೊಠಡಿಯ ಉದ್ಘಾಟನೆಯನ್ನು ನೆರವೇರಿಸಿದ ನಿಟುವಳ್ಳಿ ಭಾಗದ ಹಿರಿಯ ಮುಖಂಡ ಆರ್.ಎಸ್. ಶೇಖರಪ್ಪ ಮಾತನಾಡಿ, ದಾವಣಗೆರೆ ಜಿಲ್ಲೆಯ ಪ್ರಥಮ ಸಹಕಾರಿ ಬ್ಯಾಂಕ್ ಮತ್ತು ಪ್ರತಿಷ್ಠಿತ ಸಹಕಾರಿ ಎಂಬ ಹೆಗ್ಗಳಿಕೆ ಪಡೆದಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ ಶಾಖೆಯನ್ನು ನಿಟುವಳ್ಳಿಯಲ್ಲಿ ಆರಂಭಿಸಿರುವುದು ತಮಗೆ ಸಂತಸವನ್ನುಂಟುಮಾಡಿದೆ ಎಂದರಲ್ಲದೇ, ಈ ಭಾಗದಲ್ಲಿ ಅಭಿವೃದ್ಧಿಪಡಿಸುವಲ್ಲಿ ತಮ್ಮ ಪಾತ್ರ ನಿರ್ವಹಿಸುವುದಾಗಿ ಭರವಸೆ ನೀಡಿದರು.

**ಸಭಾ ಕಾರ್ಯಕ್ರಮ**

ಸಭಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿದ ಸಹಕಾರ ಸಂಘಗಳ ಉಪ ನಿಬಂಧಕ ಟಿ. ಮಧು ಶ್ರೀನಿವಾಸ್ ಮಾತನಾಡಿ, ಸಹಕಾರ ಬ್ಯಾಂಕುಗಳ ಮೂಲಕ ಸರ್ಕಾರ ನೀಡುತ್ತಿರುವ ಯಶಸ್ವಿನಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಷೇರುದಾರರಿಗೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಗರಸಭೆ ಮಾಜಿ ಅಧ್ಯಕ್ಷ ಆರ್.ಹೆಚ್. ನಾಗಭೂಷಣ್ ಮತ್ತು ಮಹಾನಗರ ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಮಾತನಾಡಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನೂತನ ನಿಟುವಳ್ಳಿ ಶಾಖೆಯು ಈ ಬ್ಯಾಂಕಿನ ಇತರೆ ಶಾಖೆಗಳಿಗಿಂತ ಹೆಚ್ಚು ಅಭಿವೃದ್ಧಿ ಹೊಂದಲಿ ಎಂದು ಶುಭ ಹಾರೈಸಿದರು.

ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಿಕಟಪೂರ್ವ ಅಧ್ಯಕ್ಷರೂ, ಹಾಲಿ ಹಿರಿಯ ನಿರ್ದೇಶಕರೂ, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆದ ಕೋಗುಂಡಿ ಬಕ್ಕೇಶಪ್ಪ, ನಿಟುವಳ್ಳಿ ಶಾಖೆ ಆರಂಭಿಸಿರುವ ಅಗತ್ಯತೆಯನ್ನು ತಿಳಿಸಿದರಲ್ಲದೇ, ತಾವು ಈ ಬ್ಯಾಂಕ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಿಟುವಳ್ಳಿ ಶಾಖೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದ್ದು ತಮಗೆ ಹರ್ಷವನ್ನುಂಟುಮಾಡಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜವಳಿ ಉದ್ಯಮಿಯೂ ಆಗಿರುವ ಬ್ಯಾಂಕಿನ ಅಧ್ಯಕ್ಷ ಬಿ.ಸಿ. ಉಮಾಪತಿ ಮಾತನಾಡಿ, ದಾವಣಗೆರೆ ಅರ್ಬನ್ ಬ್ಯಾಂಕ್ ಆರಂಭದಿಂದ ಈವರೆಗಿನ ಪ್ರಗತಿಯನ್ನು ಸಭಿಕರೊಂದಿಗೆ ಹಂಚಿಕೊಂಡರಲ್ಲದೇ, ಷೇರುದಾರರ ಮತ್ತು ಗ್ರಾಹಕರ ಅಭಿಮಾನದಿಂದಾಗಿ ಈ ಬ್ಯಾಂಕ್ ಅಭಿವೃದ್ಧಿಗೆ ಕಾರಣವಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಹಿರಿಯ ವರ್ತಕರೂ ಆಗಿರುವ ಬ್ಯಾಂಕಿನ ಉಪಾಧ್ಯಕ್ಷ ಟಿ. ಎಸ್. ಜಯರುದ್ರೇಶ್ ಅವರು ಅತಿಥಿ ಗಣ್ಯರನ್ನು ಸ್ವಾಗತಿಸುತ್ತಾ, ಬ್ಯಾಂಕಿನ ಸದಸ್ಯರು, ಗ್ರಾಹಕರು, (5ನೇ ಪುಟಕ್ಕೆ)

### ಬೇಡಿಕೆಗೆ ಸ್ಪಂದಿಸಿದ ಬ್ಯಾಂಕ್

ತನ್ನದೇ ಆದ ಪ್ರಾಮಾಣಿಕ ಸೇವೆಯಿಂದ ಜಿಲ್ಲೆಯಲ್ಲಿ ಹೆಸರು ವಾಸಿಯಾಗಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸೇವೆ ನಿಟುವಳ್ಳಿ ಭಾಗದ ಜನರಿಗೂ ಸಿಗುವಂತಾಗಲು ಶಾಖೆ ಆರಂಭಿಸುವಂತೆ ಮೊದಲು ಬೇಡಿಕೆ ಇಟ್ಟಿದ್ದ ತಮಗೆ ಇದೀಗ ಈ ಶಾಖೆ ಆರಂಭದಿಂದ ತಮಗೆ ಹರ್ಷವನ್ನುಂಟು ಮಾಡಿದೆ ಎಂದು ಬ್ಯಾಂಕಿನ ಹಿರಿಯ ಗ್ರಾಹಕರಲ್ಲೊಬ್ಬರಾಗಿರುವ ನಗರಸಭೆ ಮಾಜಿ ಅಧ್ಯಕ್ಷ ಆರ್.ಹೆಚ್. ನಾಗಭೂಷಣ್ ಹೇಳಿದರು.

ಈ ಬ್ಯಾಂಕ್, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರ ದಕ್ಷತೆಯಿಂದಾಗಿ ಗ್ರಾಹಕರಿಗೆ ಹತ್ತಿರವಾಗಿದ್ದು, ಇದರಿಂದ ಎಲ್ಲರ ಪ್ರೀತಿಯ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು. ಈ ಶಾಖೆಯ ಪ್ರಗತಿಗೆ ತಾವು ಶ್ರಮಿಸುವುದಾಗಿ ನಾಗಭೂಷಣ್ ತಿಳಿಸಿದರು.

## ಭಾರತದ ಹಸಿರು ಹೊದಿಕೆಯಿಂದ ಮಾಲಿನ್ಯಕ್ಕಿಂತ ಹೆಚ್ಚಿನ ಇಂಗಾಲ ಹೀರಿಕೆ

ಮುಂಬೈ, ಫೆ. 16 - ಭಾರತ ಕಳೆದ ದಶಕದಲ್ಲಿ ಹೊರಹಾಕಿದ್ದ ತ್ಯಾಜ್ಯಕ್ಕಿಂತ ಹೆಚ್ಚಿನ ಪ್ರಮಾಣದ ಇಂಗಾಲವನ್ನು ಹಸಿರು ಹೊದಿಕೆ ಹೀರಿಕೊಂಡಿದೆ. ಆದರೆ ಬರ ರೀತಿಯ ವಿಕೋಪ ಪರಿಸ್ಥಿತಿಗಳಲ್ಲಿ ಇಂಗಾಲ ಹೀರಿಕೊಳ್ಳುವ ಪ್ರಮಾಣ ಕಡಿಮೆಯಾಗಿದೆ ಎಂದು ಅಧ್ಯಯನ ಒಂದು ತಿಳಿಸಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ (ಐಐಎಸ್‌ಇಆರ್), ಭೋಪಾಲ್ ಸಂಸ್ಥೆ ನಡೆಸಿದ ಅಧ್ಯಯನ ಈ ಮಾಹಿತಿ ನೀಡಿದೆ.

ಈ ಬಗ್ಗೆ ಮಾತನಾಡಿರುವ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕಿ ಧನ್ಯಲಕ್ಷ್ಮಿ ಪಿಳ್ಳೈ, ಕಳೆದ ದಶಕದಲ್ಲಿ ಪ್ರತಿವರ್ಷಕ್ಕೆ 380 ರಿಂದ 530 ದಶಲಕ್ಷ ಟನ್ ಪ್ರಮಾಣದ ಹೆಚ್ಚಿನ ಇಂಗಾಲ ಹೀರಿಕೆಯಾಗಿದೆ ಎಂದಿದ್ದಾರೆ.

ಆದರೆ, ವಿಕೋಪ ಪರಿಸ್ಥಿತಿಯಲ್ಲಿ ಇಂಗಾಲದ ಹೀರಿಕೆ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿಸರ ಬದಲಾವಣೆ ಹಾಗೂ ಹೊಂದಾಣಿಕೆಗೆ ಅನುಗುಣವಾಗಿ ಹಸಿರು ಹೊದಿಕೆ ಕಾಯ್ದುಕೊಳ್ಳಬೇಕಿದೆ ಎಂದವರು ಹೇಳಿದ್ದಾರೆ.

## ಭಾರತದ ಮತದಾನ : 21 ದಶಲಕ್ಷ ಡಾಲರ್ ಅನುದಾನ ಕಡಿತ

ನ್ಯೂಯಾರ್ಕ್, ಫೆ. 16 - ಉದ್ಯಮಿ ಎಲಾನ್ ಮಸ್ಕ್ ನೇತೃತ್ವದ ಅಮೆರಿಕದ ದಕ್ಷತಾ ಇಲಾಖೆಯು ಭಾರತದ ಮತದಾನಕ್ಕಾಗಿ ನೀಡಲಾಗುತ್ತಿದ್ದ 21 ದಶಲಕ್ಷ ಡಾಲರ್ ಅನುದಾನವನ್ನು ಕಡಿತಗೊಳಿಸಿದೆ.


ಅಮೆರಿಕದ ಆಡಳಿತದಲ್ಲಿ ದಕ್ಷತೆ ತರಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಸ್ಕ್ ನೇತೃತ್ವದ ಹೊಸ ದಕ್ಷತಾ ಇಲಾಖೆ ರೂಪಿಸಿದ್ದರು. ಈ ಇಲಾಖೆಯು ಸರ್ಕಾರದ ಹಲವಾರು ವೆಚ್ಚಗಳನ್ನು ಕಡಿತಗೊಳಿಸುತ್ತಿದೆ.

ಶನಿವಾರದಂದು 486 ದಶಲಕ್ಷ ಡಾಲರ್ ಅನುದಾನ ಕಡಿತಗೊಳಿಸುವುದಾಗಿ ಪ್ರಕಟಿಸಲಾಗಿದೆ. ಇದರಲ್ಲಿ ಭಾರತದಲ್ಲಿನ ಮತದಾನ ಬಲಗೊಳಿಸಲು ನೀಡಲಾಗುತ್ತಿದ್ದ 21 ದಶಲಕ್ಷ ಡಾಲರ್ ಸಹ ಸೇರಿದೆ.

ಅಮೆರಿಕ ಕಡಿತಗೊಳಿಸಿರುವ ಅನುದಾನದಲ್ಲಿ ಬಾಂಗ್ಲಾದೇಶದಲ್ಲಿ ರಾಜಕೀಯ ಪರಿಸ್ಥಿತಿ ಬಲಗೊಳಿಸಲು ನೀಡಲಾಗುತ್ತಿದ್ದ 29 ದಶಲಕ್ಷ ಡಾಲರ್, ನೇಪಾಳದಲ್ಲಿ ವಿತ್ತೀಯ ಒಕ್ಕೂಟಕ್ಕೆ ನೀಡಲಾಗುತ್ತಿದ್ದ 20 ದಶಲಕ್ಷ ಡಾಲರ್ ಹಾಗೂ ಜೀವವೈವಿಧ್ಯತೆಯ ಸಂವಾದಕ್ಕೆ ನೀಡಲಾಗುತ್ತಿದ್ದ 19 ದಶಲಕ್ಷ ಡಾಲರ್ ಸಹ ಸೇರಿದೆ.

# ಸಾಹಿತ್ಯದ ಮೇಲೆ ಮಹಿಳೆಯರ ಒಲವು ಹೆಚ್ಚಲಿ

## 'ಭಾವಗಳ ಬಿಂಬ' ಲೋಕಾರ್ಪಣೆ ಸಮಾರಂಭದಲ್ಲಿ ಶಿವಾನಂದ ತಗಡೂರು



ದಾವಣಗೆರೆ, ಫೆ. 16- ಮಹಿಳೆಯರು ಬದುಕಿನ ಜೊತೆಗೆ ಸಾಹಿತ್ಯದ ಬಗ್ಗೆಯೂ ಒಲವು ತೋರಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಕರೆ ನೀಡಿದರು.

ಎ.ವಿ. ಪ್ರಕಾಶನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಶ್ರೀಮತಿ ಅನುಪಮ ವಿರೂಪಾಕ್ಷಪ್ಪ ಇವರ ದ್ವಿತೀಯ ಕವನ ಸಂಕಲನ 'ಭಾವಗಳ ಬಿಂಬ' ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಿತ್ಯದ ಬದುಕಿನಾಚೆಗೆ ಗೃಹಿಣಿಯರು ಸಾಹಿತ್ಯದ ಒಲವು ಮೂಡಿಸಿಕೊಳ್ಳಬೇಕು. ಆ ಮೂಲಕ ತಮ್ಮ ಪ್ರತಿಭೆಗಳನ್ನು ತೋರಿಸುವುದು ಅಸಾಧ್ಯವಲ್ಲ. ಆ ಕೆಲಸವನ್ನು ಅನುಪಮಾ ಅವರು ಮಾಡಿದ್ದಾರೆ ಎಂದರು.

ಸಾಹಿತ್ಯ ನಿಂತ ನೀರಲ್ಲ. ಅದು ಬದುಕಿಗೆ ಪ್ರೇರಣೆ ನೀಡುತ್ತದೆ. ಬರವಣಿಗೆ ಪ್ರಕ್ರಿಯೆಯನ್ನು ಕೈ ಬಿಡಬಾರದು. ಭಾವಗಳ ಬಿಂಬ ಕವನ ಸಂಕಲನದ ಮೂಲಕ ಅನುಪಮ ಅವರು ಅನೇಕ ಘಟನೆಗಳಿಗೆ ತಮ್ಮದೇ ಇತಿ-ಮಿತಿಯಲ್ಲಿ ಕನ್ನಡಿ ಹಿಡಿದಿದ್ದಾರೆ ಎಂದರು. ಇತ್ತೀಚಿನ ದಿನಗಳಲ್ಲಿ ಎಲ್ಲರೂ ವಾಟ್ಸಾಪ್ ಪರಿಣಿತರೇ ಆಗಿದ್ದಾರೆ. ಅಂತವರ ನಡುವೆ ಪುಸ್ತಕದ ಕಡೆ ತಿರುಗಿ ನೋಡುವ ಚಿಕ್ಕ ಪ್ರಯತ್ನವನ್ನು ವೈದ್ಯ ದಂಪತಿ ಮಾಡಿರುವುದು ಅಭಿನಂದನಾರ್ಹ ಎಂದರು.

ಜೀವನ ತುಂಬಾ ಚಿಕ್ಕದು. ಇರುವಷ್ಟು ದಿನ ನೆರೆ ಹೊರೆಯವರ ಕಷ್ಟಗಳಿಗೆ ಸ್ಪಂದಿಸುತ್ತಾ, ಧನ್ಯತಾ ಭಾವದಿಂದ ಬದುಕಬೇಕು ಎಂದು ಹೇಳಿದರು.

ಪ್ರೀತಿ, ಮಾನವೀಯತೆ, ಅಕ್ಕರೆಯಿಂದ ಚಿಕಿತ್ಸೆ ಕೊಡುವ ವೈದ್ಯರಿಗಿಂತ ಹಣದ ಬೆನ್ನತ್ತಿ ಹೋಗುವ ವೈದ್ಯರೇ ಹೆಚ್ಚಾಗಿರುವ ಈ ದಿನಗಳಲ್ಲಿ ಹಣ ಇರಲಿ, ಬಿಡಲಿ ಮಾನವೀಯತೆಯ ತುಡಿತದಿಂದ ಸ್ಪಂದಿಸುವ ವಿರಳ ವೈದ್ಯರಲ್ಲಿ ವಿರೂಪಾಕ್ಷಪ್ಪ ಒಬ್ಬರು. ಅವರ ಪತ್ನಿ ಕವಿ ಹೃದಯದ ಹೆಣ್ಣು ಎಂದು ಬಣ್ಣಿಸಿದರು.

ಜಾನಪದ ತಜ್ಞ ಡಾ.ಬಸವರಾಜ ನೆಲ್ಲಿಸರ ಕವನ ಸಂಕಲನದ ಕುರಿತು ಮಾತನಾಡುತ್ತಾ, ಸಾಹಿತ್ಯದ ಆಸಕ್ತಿ, ಶ್ರದ್ಧೆ, ಅಭಿರುಚಿ ಕವನ ಸಂಕಲನದಲ್ಲಿ ಮೇಲ್ಮಟ್ಟದಲ್ಲಿದೆ ಎಂದರು. ಮಾತುಗಳು ಎಷ್ಟು ಮುಖ್ಯ? ಹೇಗೆ ಮಾತನಾಡಬೇಕು ಎನ್ನುವ ಮಾತಿನ ಮಹತ್ವ ಕವನಗಳಲ್ಲಿ ಕಂಡು ಬರುತ್ತದೆ ಎಂದರು.

ಜಾಗತೀಕರಣ, ಆಧುನೀಕರಣದ ಯುಗದಲ್ಲಿ ಮಕ್ಕಳು ಕಳೆದು ಹೋಗಿದ್ದಾರೆ. ಮಕ್ಕಳು ಮೊಬೈಲ್ ಗೀಳು ಹೆಚ್ಚಾಗಿಸಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಸಮಾರಂಭಗಳಿಗೆ ಮಕ್ಕಳನ್ನು ಕರೆ ತರುವಂತಾಗಬೇಕು. ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸಿ, ಕೀಳರಿಮೆ ಹೊಡೆದೋಡಿಸಿ ಬದುಕಬೇಕೆಂಬುದನ್ನು ಕವನಗಳ ಮೂಲಕ ತಿಳಿಸಿದ್ದಾರೆ ಎಂದರು.

ಲೇಖಕಿ ಅನುಪಮ ವಿರುಪಾಕ್ಷಪ್ಪ ಮಾತನಾಡುತ್ತಾ, ಮನುಷ್ಯ ಮೌಲ್ಯದ ಅಡಿಪಾಯದಲ್ಲಿ ಬದುಕುತ್ತಾ ಹಣ, ಆಸ್ತಿ ಕೀರ್ತಿ ಗಳಿಸಿದಾಗ ಮಾತ್ರ ಬದುಕು ಅರ್ಥಪೂರ್ಣವಾಗುತ್ತದೆ. ಮೌಲ್ಯಗಳಿಲ್ಲದ ಜೀವನಕ್ಕೆ ಅರ್ಥವಿಲ್ಲ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್, ಪತ್ರಕರ್ತ ಜಿಗಳಿ ಪ್ರಕಾಶ್ ಉಪಸ್ಥಿತರಿದ್ದರು.

ದಾವಣಗೆರೆ ವಿವಿ ಪ್ರಾಧ್ಯಾಪಕ ಡಾ. ಅಶೋಕ್ ಕುಮಾರ್ ಪಾಳೇದ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಸಾಪ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ನಿರೂಪಿಸಿದರು. ಡಾ. ಇ. ವಿರುಪಾಕ್ಷಪ್ಪ ಸ್ವಾಗತಿಸಿದರು. ಕು.ಸಂಹಿತ ಪ್ರಾರ್ಥಿಸಿದರು.

## ಆವರಗೊಳ್ಳದಲ್ಲಿ ಇಂದು ವೀರಭದ್ರ ಸ್ವಾಮಿ ರಥೋತ್ಸವ



ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇಂದು ಜರುಗಲಿದೆ ಎಂದು ವೀರಭದ್ರೇಶ್ವರ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ತಿಳಿಸಿದರು.

ಇಂದು ಸಂಜೆ 6 ಗಂಟೆಗೆ ಸ್ವಾಮಿಯ ಮಹಾ ರಥೋತ್ಸವ ನಡೆದ ಬಳಿಕ ರಾತ್ರಿ ಉಯ್ಯಾಲೆ ಮಂಟಪದಲ್ಲಿ ಸ್ವಾಮಿ ಆಸೀನರಾಗಲಿದ್ದು, ನಂತರ ವೀರಗಾಸೆ ಸೇವೆ ನಡೆಯಲಿದೆ. ನಾಳೆ ಮಂಗಳವಾರ ಬೆಳಗ್ಗೆ 8ಕ್ಕೆ ಸ್ವಾಮಿಯ ಗುಗ್ಗಳ ಸೇವೆ, ರಾತ್ರಿ 10 ಗಂಟೆಗೆ ಭಕ್ತರಿಂದ ಓಕಳಿ ಸೇವೆ ಮತ್ತು ಗಂಗಾ ಪೂಜೆ ನಡೆಯಲಿದೆ.

ದಿನಾಂಕ 19ರಂದು ಬೆಳಿಗ್ಗೆ 8 ಗಂಟೆಗೆ ಸಕಲ ಬಿರುದಾವಳಿಗಳೊಂದಿಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ರೇವಣಸಿದ್ದೇಶ್ವರ ಹಾಗೂ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಂದು ಸೇರುವುದು. ಕೊನೆಯ ದಿನವಾದ 20ನೇ ತಾರೀಖಿನಂದು ಗುರುವಾರ ಕಂಕಣ ವಿಸರ್ಜನೆ ನಡೆಯಲಿದೆ.

## ವಾರಾಂತ್ಯದಲ್ಲಿ ಮಧ್ಯಪ್ರದೇಶ - ಉತ್ತರ ಪ್ರದೇಶ ಗಡಿಯಲ್ಲಿ ಹೆಚ್ಚಿದ ಕುಂಭ ಸಂಚಾರ

ರೇವಾ, ಫೆ. 16 - ವಾರಾಂತ್ಯದಲ್ಲಿ ಕುಂಭಮೇಳಕ್ಕೆ ತೆರಳುವ ಯಾತ್ರಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಇದರಿಂದಾಗಿ ಉತ್ತರ ಪ್ರದೇಶದ ಮಹಾಕುಂಭ ನಡೆಯುತ್ತಿರುವ ಪ್ರಯಾಗ್‌ರಾಜ್‌ಗೆ ಹೊಂದಿಕೊಂಡಿರುವ ಮಧ್ಯಪ್ರದೇಶದ ರೇವಾದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೆಕ್‌ಘಾಟ್ ಗಡಿಯಲ್ಲಿ ಪ್ರತಿ ಗಂಟೆಗೆ ಸಾವಿರ ವಾಹನಗಳು ಪ್ರಯಾಗ್‌ರಾಜ್ ಕಡೆ, ತೆರಳುತ್ತಿವೆ ಹಾಗೂ 800 ವಾಹನಗಳು ಮರಳುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಪ್ರಯಾಗ್‌ರಾಜ್ ಚೆಕ್‌ಘಾಟ್‌ಗಿಂತ 45 ಕಿ.ಮೀ. ದೂರದಲ್ಲಿದೆ. ಚೆಕ್‌ಘಾಟ್‌ನ 6 ಕಿ.ಮೀ ದೂರದಲ್ಲಿ ಕುಂಭಮೇಳದ ಮೊದಲ ನಿಲುಗಡೆ ಲಭ್ಯವಿದೆ.

ಶನಿವಾರದಂದು ಸಂಚಾರಕ್ಕೆ ಯಾವುದೇ ಅಡ್ಡಿಯಾಗಿಲ್ಲ. ಆದರೆ ಕುಂಭಮೇಳಕ್ಕೆ ತೆರಳುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಮತದಾನಕ್ಕೆ ಅಮೆರಿಕದ ಹಣ ಎಂಬ ವರದಿಗಳು ಆಧಾರ ರಹಿತ : ಖುರೇಷಿ

ನವದೆಹಲಿ, ಫೆ. 16 - ಭಾರತದ ಮತದಾನದ ಪ್ರಮಾಣ ಹೆಚ್ಚಿಸಲು ಅಮೆರಿಕದ ಸಂಸ್ಥೆ ಹಣಕಾಸು ಒದಗಿಸಿತ್ತು ಎಂಬ ವರದಿಗಳನ್ನು ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿ ತಳ್ಳಿ ಹಾಕಿದ್ದಾರೆ.

ಉದ್ಯಮಿ ಎಲಾನ್ ಮಸ್ಕ್ ಅವರ ನೇತೃತ್ವದ ಅಮೆರಿಕದ ದಕ್ಷತೆ ಇಲಾಖೆಯು ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ನೀಡಲಾಗುತ್ತಿದ್ದ 21 ದಶಲಕ್ಷ ಡಾಲರ್ ಅನುದಾನ ರದ್ದುಗೊಳಿಸಿದೆ ಎಂಬ ವರದಿಯ ಹಿನ್ನೆಲೆಯಲ್ಲಿ ಖುರೇಷಿ ಈ ಪ್ರತಿಕ್ರಿಯೆ ನೀಡಿದ್ದಾರೆ.

2012ರಲ್ಲಿ ನಾನು ಮುಖ್ಯ ಚುನಾವಣಾ ಆಯುಕ್ತ ಆಗಿದ್ದ ಸಂದರ್ಭದಲ್ಲಿ ಈ ಅನುದಾನಕ್ಕಾಗಿ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು ಎಂದು ಭಾರತದ ಮಾಧ್ಯಮಗಳು ವರದಿ ಮಾಡಿವೆ. ಇದರಲ್ಲಿ ಸತ್ಯಾಂಶವಿಲ್ಲ ಎಂದು ಖುರೇಷಿ ಹೇಳಿದ್ದಾರೆ.

ಇಂಟರ್‌ನ್ಯಾಷನಲ್ ಫೌಂಡೇಶನ್ ಫಾರ್ ಎಲೆಕ್ಟೋರಲ್ ಸಿಸ್ಟಮ್ ಜೊತೆ 2012ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದೇ ರೀತಿಯ ಹಲವು ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಇದರಲ್ಲಿ ಹಣಕಾಸಿನ ಅಂಶಗಳು ಇರಲಿಲ್ಲ ಹಾಗೂ ಹಣಕಾಸಿನ ಭರವಸೆಗಳೂ ಇರಲಿಲ್ಲ ಎಂದು ಖುರೇಷಿ ತಿಳಿಸಿದ್ದಾರೆ.

## ಮಹಾಕುಂಭ ಅರ್ಥಹೀನ : ಲಾಲು


ಪಾಟ್ನಾ, ಫೆ. 16 - ಮಹಾಕುಂಭಮೇಳ ಅರ್ಥಹೀನ ಎಂದು ಹೇಳಿರುವ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್,ದೆಹಲಿಯಲ್ಲಿ ಕಾಲ್ತುಳಿತ ಉಂಟಾಗಿ 18 ಜನ ಸಾವನ್ನಪ್ಪಲು ರೈಲ್ವೆ ಇಲಾಖೆ ಕಾರಣ ಎಂದು ಆರೋಪಿಸಿದ್ದಾರೆ.

ದೆಹಲಿ ನಿಲ್ದಾಣದಲ್ಲಿ ಉಂಟಾದ ಕಾಲ್ತುಳಿತದ ಬಗ್ಗೆ ಹೇಳಿಕೆ ನೀಡಿರುವ ಅವರು, ಘಟನೆಯ ಹಿನ್ನೆಲೆಯಲ್ಲಿ ರೈಲ್ವೆ ಸಚಿವರು ರಾಜೀನಾಮೆ ನೀಡಬೇಕು. ಇದು ರೈಲ್ವೆಯ ಸಂಪೂರ್ಣ ವೈಫಲ್ಯ ಎಂದಿದ್ದಾರೆ.

ಇದೇ ವೇಳೆ ಮಹಾಕುಂಭ ಮೇಳದ ಬಗ್ಗೆ ಮಾತನಾಡಿರುವ ಲಾಲು ಪ್ರಸಾದ್,ಕುಂಭಮೇಳದಲ್ಲಿ ಯಾವುದೇ ಅರ್ಥವಿಲ್ಲ. ಇದೆಲ್ಲ ಅರ್ಥಹೀನ ಎಂದಿದ್ದಾರೆ.


|| ಶ್ರೀ ಕಲ್ಲೇಶ್ವರ ಪ್ರಸನ್ನ ||

ಇಪ್ಪತ್ತೆಂಟನೇ ವರ್ಷದ ಪುಣ್ಯಸ್ಮರಣೆ



ಲಿಂ|| ಶಾಮನೂರು ಶಿವಪ್ಪನವರು

ಲಿಂಗೈಕ್ಯ : 17.02.1997


ನೀವು ನಮ್ಮನ್ನಗಲಿ 28 ವರ್ಷಗಳು ಸಂದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಲಿಂ. ಶ್ರೀ ಶಾಮನೂರು ಜಯಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.



|| ಶ್ರೀ ಕಲ್ಲೇಶ್ವರ ಪ್ರಸನ್ನ ||

ಇಪ್ಪತ್ತೆಂಟನೇ ವರ್ಷದ ಪುಣ್ಯಸ್ಮರಣೆ



ಕಾಯಕದಿಂದ ಕೈಲಾಸ

ಲಿಂ|| ಶಾಮನೂರು ಶಿವಪ್ಪನವರು

ಲಿಂಗೈಕ್ಯ : 17.02.1997ರ ಸೋಮವಾರ

ನೀವು ನಮ್ಮನ್ನಗಲಿ 28 ವರ್ಷಗಳಾದವು. ನಮಗೆ ಸದಾ ಮಾರ್ಗದರ್ಶಿಗಳಾಗಿದ್ದು, ನನ್ನ ಮತ್ತು ನನ್ನ ಕುಟುಂಬ ವರ್ಗದ ಹಿತೈಷಿಗಳಾಗಿದ್ದ ಹಾಗೂ ನಗರದ ಗಣ್ಯ ವರ್ತಕರೂ,ಲಿಂಗವಂತ ಸಮಾಜದ ಮುಖಂಡರೂ ಆಗಿದ್ದ ಲಿಂ. ಶರಣ ಶಾಮನೂರು ಶಿವಪ್ಪನವರ 26ನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ತಮ್ಮನ್ನು ಸದಾ ಸ್ಮರಿಸುವ ದಿ|| ಆಲೂರು ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ದಾವಣಗೆರೆ.


## ಇಂದು ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ




ಸಿರಿಗೆರೆ ತರಳಬಾಳು ಬೃಹನ್ಮಠದಲ್ಲಿ ಇಂದು ಸದ್ಧರ್ಮ ನ್ಯಾಯ ಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194 -268829, 268848.

## ಮಣಿಪುರ : 11 ಉಗ್ರರ ಬಂಧನ

ಇಂಫಾಲ್, ಫೆ. 16 - ಕಳೆದ ಎರಡು ದಿನಗಳಲ್ಲಿ ಮಣಿಪುರದ 11 ಉಗ್ರರನ್ನು ಬಂಧಿಸಲಾಗಿದೆ ಎಂದು ಭದ್ರತಾ ಪಡೆಗಳು ತಿಳಿಸಿವೆ. ಬಂಧಿತರಲ್ಲಿ ಕುಕಿ ನ್ಯಾಷನಲ್ ಆರ್ಮಿ ಸಂಘಟನೆಗೆ ಸೇರಿದ ಏಳು ಶಂಕಿತರು ಸೇರಿದ್ದಾರೆ. ಉಳಿದ ನಾಲ್ವರು ಪಿಡಬ್ಲ್ಯೂಜಿ ಸಂಘಟನೆಗೆ ಸೇರಿದವರಾಗಿದ್ದಾರೆ.

## ನಗರದಲ್ಲಿಂದು ಕುರುವತ್ತಿ ಬಸವೇಶ್ವರ ದೇವಸ್ಥಾನದ ಕಳಸಾರೋಹಣ



ಕುರುವತ್ತಿ ಬಸವೇಶ್ವರ ದೇವಸ್ಥಾನ ಸಮಿತಿ ವತಿಯಿಂದ ಇಂದು ಕೆ.ಟಿ. ಜಂಬಣ್ಣ ನಗರದ 1ನೇ ಮುಖ್ಯ ರಸ್ತೆ, 12 ಅಡ್ಡ ರಸ್ತೆಯಲ್ಲಿನ ಕುರುವತ್ತಿ ಬಸವೇಶ್ವರ ದೇವಸ್ಥಾನದ ಕಳಸಾರೋಹಣ ಸಮಾರಂಭ ನಡೆಯಲಿದೆ.

ಹಿರೇಕುರುವತ್ತಿ ಹಿರೇಮಠದ ಸಿದ್ಧನಂದೀಶ್ವರ ಶಿವಾಚಾರ್ಯ ಶ್ರೀಗಳ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆ ಯಲಿದ್ದು, ಇಂದು ಬೆಳಿಗ್ಗೆ 6ರಿಂದ 9ರ ವರೆಗೆ ಸ್ವಾಮಿಗೆ ಮಹಾ ರುದ್ರಾಭಿ ಷೇಕ, ಕುಂಭಾಭಿಷೇಕ ನಡೆದ ನಂತರ 11.20ರಿಂದ 12.05 ರ ಶುಭ ಸಮಯದಲ್ಲಿ ಕಳಸಾರೋಹಣ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಲಲಿತ್ ಗಾರ್ಮೆಂಟ್ಸ್
ಕಾಳಿಕಾದೇವಿ ರೋಡ್, ದಾವಣಗೆರೆ.
ಮೊ. : 87228 41028



ಬೇಕಾಗಿದ್ದಾರೆ

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಶಾಂತಲಾ
ದಿ ವೆಡ್ಡಿಂಗ್ ಮಾಲ್...
ಚಾಮರಾಜ್ ಪೇಟೆ, ದಾವಣಗೆರೆ.
ಮೊ. : 96861 95327



ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 20ನೇ ಫೆಬ್ರವರಿ, 2025 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas